ಲಿಖಿತ ಮೂಲಕ
ಉತ್ತರಿಸುವ ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೨೧

**ಪಟ್ಟಿ – ೨೫**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೊಂಬತ್ತನೇ ಅಧಿವೇಶನ**

**(ಮುಂದುವರೆದ ಉಪವೇಶನ)**

**ಶುಕ್ರವಾರ, ದಿನಾಂಕ : ೨೦ನೇ ನವೆಂಬರ್, ೨೦೧೫.**

---

## ಸಮೂಹ – V

೧. ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು.

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

೩. ವಸತಿ ಸಚಿವರು.

೪. ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು.

೫. ಸಣ್ಣ ಕೈಗಾರಿಕೆ ಸಚಿವರು.

೬. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು.

೭. ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು.

---

## ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ.೩೧ರ ೧೪ ಎಕರೆ ಜಮೀನಿನಲ್ಲಿ ನಿವೇಶನದ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೩೨೦ (೨೮೩೭) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ. ೩೧ರ ೧೪ ಎಕರೆ ಜಮೀನಿನಲ್ಲಿ ಎಷ್ಟು ನಿವೇಶನ ಹಂಚಿಕೆ ಮಾಡಲಾಗಿದೆ ; (ನಿವೇಶನ ಹಂಚಿಕೆ ಮಾಡಿದ ಫಲಾನುಭವಿಗಳ ಪಟ್ಟಿ ಹಾಗೂ ಲೇಔಟ್ ಪ್ಲಾನ್ ಪ್ರತಿ ಒದಗಿಸುವುದು)

(ಆ) ಈ ಹಂಚಿಕೆ ಮಾಡಿರುವ ನಿವೇಶನದಲ್ಲಿ ಎಸ್.ಸಿ./ಎಸ್.ಟಿ ಮತ್ತು ಹಿಂದುಳಿದ ಜನಾಂಗಕ್ಕೆ ಎಷ್ಟು ನಿವೇಶನ ಹಂಚಿಕೆ ಮಾಡಲಾಗಿದೆ ; (ವಿವರ ಒದಗಿಸುವುದು)

(ಇ) ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ ೩೧ರ ೧೪ ಎಕರೆ ಜಮೀನನಲ್ಲಿ ಹಂಚಿಕೆ ಮಾಡಿ ಉಳಿದ ಖಾಲಿ ನಿವೇಶನವನ್ನು ಇನ್ನೂ ಏಕೆ ಹಂಚಿಕೆ ಮಾಡಲಾಗಿರುವುದಿಲ್ಲ ; (ವಿವರ ನೀಡುವುದು)

## ಮರಳು ದಂಧೆಯ ಬಗ್ಗೆ.

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೩೨೧(೨೬೮೮) ಮಾನ್ಯ ಗಣಿ ವಿಜ್ಞಾನ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮರಳು ದಂದೆ ನಿರಂತರವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಮರಳು ನೀತಿ ಜಾರಿಯಲ್ಲಿದ್ದರು ಮರಳು ದಂದೆಕೋರರ ಹಾವಳಿ ನಿಲ್ಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮರಳು ಇಲ್ಲದೆ ಸರ್ಕಾರಿ ಕಾಮಗಾರಿಗಳು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಮರಳು ನೀತಿಯಿಂದ ಸಾರ್ವಜನಿಕರು ದುಪ್ಪಟ್ಟು ಹಣ ಕೊಟ್ಟು ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶೌಚಾಲಯಗಳು.

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೩೨೨(೨೭೪೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶೌಚಾಲಯಗಳು ಇಲ್ಲದೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶೌಚಾಲಯಗಳು ಇರುವ ಮತ್ತು ಇಲ್ಲದೆ ಇರುವ ಶಾಲೆಗಳೆಷ್ಟು ; ಶೌಚಾಲಯಗಳು ಇಲ್ಲದ ಶಾಲೆಗಳಲ್ಲಿ ಶೌಚಾಲಯನಿರ್ಮಾಣಕ್ಕೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ ;

(ಇ) ರಾಜ್ಯದಲ್ಲಿರುವ ಎಲ್ಲಾ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇದೆಯೇ ; ಕುಡಿಯುವ ನೀರಿನ ಸೌಲಭ್ಯವಿಲ್ಲದ ಶಾಲೆಗಳಲ್ಲಿ ನೀರಿನ ವ್ಯವಸ್ಥೆಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮ–೩೨ ರಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಸ್ಥಾನಪನ್ನ ಬಡ್ತಿ ಕುರಿತು.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–**

೨೩೨೩(೨೮೯೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ "ಎ' ವೃಂದದ ಕಿರಿಯ ವೇತನ ಶ್ರೇಣಿಯ ಅಧಿಕಾರಿಗಳ ಹುದ್ದೆಗಳನ್ನು ನೇರವಾಗಿ ಸ್ಥಾನಪನ್ನ ಬಡ್ತಿ ಮೂಲಕ ಭರ್ತಿಗೊಳಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 'ಬಿ' ವೃಂದದ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹಾಗೂ ತತ್ಸಮಾನ ಹುದ್ದೆಯ ಎಷ್ಟು ಜನ ಅಧಿಕಾರಿಗಳು ನಿಯಮ–೩೨ ರಡಿ ಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ;

(ಇ) ನೇಮಕಗೊಂಡ 'ಬಿ' ವೃಂದದ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹಾಗೂ ತತ್ಸಮಾನ ಹುದ್ದೆಯ ಅಧಿಕಾರಿಗಳಿಗೆ ಯಾವ ಅವಧಿಯವರೆಗೆ ನಿಯಮ–೩೨ ರಡಿ ಬಡ್ತಿ ನೀಡಲಾಗಿದೆ ;

(ಈ) ನಿಯಮ–೩೨ ರಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಪೈಕಿ, ನೇಮಕಾತಿ ದಿನಾಂಕವನ್ನು ಪರಿಗಣಿಸಿ ಎಷ್ಟು ಜನ ಅಧಿಕಾರಿಗಳಿಗೆ ಖಾಯಂ ಬಡ್ತಿ ನೀಡಿ ಆದೇಶ ಹೊರಡಿಸಲಾಗಿದೆ ; (ಅಧಿಕಾರಿಗಳ ಸಂಖ್ಯೆ ಮತ್ತು ಖಾಯಂ ಬಡ್ತಿ ನೀಡಿ ಆದೇಶ ಹೊರಡಿಸಿದ ದಿನಾಂಕದೊಂದಿಗೆ ವಿವರ ನೀಡುವುದು)

(ಉ) ನಿಯಮ–೩೨ ರಡಿ ಕಾರ್ಯನಿರ್ವಹಿಸುತ್ತಿರುವ ಬಾಕಿ ಉಳಿದಿರುವ ಅಧಿಕಾರಿಗಳಿಗೆ ಖಾಯಂ ಬಡ್ತಿ ನೀಡಲು ಇಲಾಖೆ ವಿಳಂಬ ಮಾಡುತ್ತಿರಲು ಕಾರಣಗಳೇನು ;

(ಊ) ನಿಯಮ–೩೨ರಡಿ ಕಾರ್ಯನಿರ್ವಹಿಸುತ್ತಿರುವ ಉಳಿದ ಅಧಿಕಾರಿಗಳಿಗೆ ಯಾವ ಕಾಲಾವಧಿಯಲ್ಲಿ ಖಾಯಂಗೊಳಿಸಲು ಕ್ರಮ ಕೈಗೊಳ್ಳಲಾಗುವುದು ?

## ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಗ್ರೂಪ್ 'ಬಿ' ವೃಂದದ ಮುಖ್ಯ ಶಿಕ್ಷಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಬಡ್ತಿ ಕುರಿತು.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೨೩೨೪ (೨೬೮೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಮುಖ್ಯ ಶಿಕ್ಷಕರ ಗ್ರೂಪ್ 'ಬಿ' ವೃಂದದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಶಿಕ್ಷಣಾಧಿಕಾರಿಗಳ ವೃಂದದ ಹುದ್ದೆಗಳಿಗೆ ಬಡ್ತಿ ನೀಡುವ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಶಿಕ್ಷಣಾಧಿಕಾರಿಗಳ ವೃಂದದ ಸಾಕಷ್ಟು ಹುದ್ದೆಗಳು ಇಲಾಖೆಯಲ್ಲಿ ಖಾಲಿಯಿದ್ದು, ಇದರಿಂದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಪ್ರಗತಿಗೆ ತೊಂದರೆಯಾಗಿರುವುದನ್ನು ಸರ್ಕಾರ ಪರಿಶೀಲಿಸಿದೆಯೇ ;

(ಇ) ೨೦೧೩ ರಿಂದ ಇಲ್ಲಿಯವರೆಗೆ ಶಿಕ್ಷಣಾಧಿಕಾರಿಗಳ ವೃಂದದ ಹುದ್ದೆಗಳಿಗೆ ಬಡ್ತಿ ನೀಡದಿರಲು ಕಾರಣಗಳೇನು ;

(ಈ) ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳ ಅಧಿಕಾರಿಗಳಿಗೆ ಸಂಬಂಧಿಸಿ ಅಂತಿಮಗೊಳಿಸಲಾದ ಜೇಷ್ಠತಾ ಪಟ್ಟಿಯಂತೆ, ಶಿಕ್ಷಣಾಧಿಕಾರಿಗಳ ವೃಂದದ ಹುದ್ದೆಗಳಿಗೆ ಬಡ್ತಿ ನೀಡಲು ಸರ್ಕಾರ ಅವಶ್ಯ ಕ್ರಮ ಕೈಗೊಳ್ಳುವುದೇ ?

## ಶಿಕ್ಷಣ ವ್ಯವಸ್ಥೆಯಲ್ಲಿ ತ್ರಿ ಟೈರ್ ಪದ್ಧತಿಯನ್ನು ಪೂರ್ಣಪ್ರಮಾಣದಲ್ಲಿ ಅಳವಡಿಸುವ ಕುರಿತು.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೨೩೨೫ (೨೬೯೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಾಧ್ಯಮಿಕ ಶಿಕ್ಷಣ ಅಭಿಯಾನವನ್ನು ಯಾವ ದಿನಾಂಕದಿಂದ ಜಾರಿಗೆ ತರಲಾಗಿದೆ ; ಅದರ ಮುಖ್ಯ ಅಂಶಗಳೇನು ;

(ಆ) ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ ಹಾಗೂ ಮಾಧ್ಯಮಿಕ ಶಾಲೆ ಹೀಗೆ ಮೂರು ವಿವಿಧ ಶಿಕ್ಷಣ ವ್ಯವಸ್ಥೆಯನ್ನು ದೇಶಾದ್ಯಂತ ಜಾರಿಯಲ್ಲಿದ್ದು, ರಾಜ್ಯದಲ್ಲಿ ಈ ಪದ್ಧತಿಯನ್ನು ಈವರೆಗೆ ಅಳವಡಿಸದಿರಲು ಕಾರಣಗಳೇನು ; ಜಾರಿಗೆ ತರುವ

ಯೋಜನೆಯನ್ನು ಕೈಗೊಂಡಿದ್ದಲ್ಲಿ, ಈಗಾಗಲೇ ಕೈಗೊಳ್ಳಲಾದ ಕ್ರಮಗಳ ಸಂಪೂರ್ಣ ವಿವರ ನೀಡುವುದು ;

(ಇ) ಸಿ.ಬಿ.ಎಸ್.ಸಿ. ಪಠ್ಯಕ್ರಮವನ್ನು ಜಾರಿಗೆ ತಂದಿದ್ದು, ಶಿಕ್ಷಕ ಮತ್ತು ಮಕ್ಕಳ ಅನುಪಾತದ ದರ ಯಾವ ಪ್ರಮಾಣದಲ್ಲಿದೆ ;

(ಈ) ರಾಜ್ಯದಲ್ಲಿ ಶಿಕ್ಷಕರ ಮತ್ತು ಮಕ್ಕಳ ಅನುಪಾತ (Teachers People Ratio) ಇನ್ನೂ ೧–೨೦ ಇರುವುದು ನಿಜವೇ ; ಹಾಗಿದ್ದಲ್ಲಿ ಕೇಂದ್ರದ ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಿದಂತೆ ಮಕ್ಕಳ ಮತ್ತು ಶಿಕ್ಷಕರ ಅನುಪಾತವನ್ನು ರಾಜ್ಯ ಸರ್ಕಾರದ ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಉ) ಸಿ.ಸಿ.ಇ. ಪದ್ಧತಿ ಅಳವಡಿಸುವ ನಂತರವೂ ಸಹ ೨೦:೧ ಅನುಪಾತವನ್ನು ಮುಂದುವರೆಸಿದ್ದು, ಇದರಿಂದ ಶಿಕ್ಷಣ ಮಟ್ಟದ ಪ್ರಗತಿಗೆ ತೊಂದರೆಯಾಗಿದ್ದು ಸರ್ಕಾರ ಕೇಂದ್ರದ ಮಾದರಿಯಲ್ಲಿ ಮಕ್ಕಳ ಮತ್ತು ಶಿಕ್ಷಕರ ಅನುಪಾತವನ್ನು ನಿಗದಿಪಡಿಸಲು ಕ್ರಮ ಕೈಗೊಳ್ಳುವುದೇ ?

## ಬೆಳಗಾವಿ ವಿಭಾಗದಲ್ಲಿ ಖಾಸಗಿ ಅನುದಾನಿತ ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ: ೧.೧.೨೦೧೩ ರಿಂದ ೩೧.೧೦.೨೦೧೫ ರ ಅವಧಿಯಲ್ಲಿ ಖಾಲಿಯಿರುವ ಹುದ್ದೆಗಳ ವಿವರದ ಕುರಿತು.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೨೩೨೬ (೨೯೬೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ವಿಭಾಗದ ಅನುದಾನಿತ ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ/ನಿಧನ/ರಾಜೀನಾಮೆ ಹಾಗೂ ಇತರ ಕಾರಣಗಳಿಂದ ತೆರವಾದ ಬೋಧಕ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು–ವಿಷಯವಾರು ಹಾಗೂ ವರ್ಷವಾರು ವಿವರ ನೀಡುವುದು)

(ಆ) ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಹುದ್ದೆಗಳು ಖಾಲಿಯಾಗಿರುವುದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಶೈಕ್ಷಣಿಕ ಪ್ರಗತಿ ಕುಂಟಿತಗೊಳ್ಳುವ ಸಾಧ್ಯತೆಯನ್ನು ಸರ್ಕಾರ ಗಮನಿಸಿದೆಯೇ ; ಹಾಗಿದ್ದರೆ ಆ ಮಕ್ಕಳ ಶಿಕ್ಷಣದ ಪ್ರಗತಿಗೆ ಕೈಗೊಳ್ಳುವ ಕ್ರಮಗಳೇನು ;

(ಇ) ಈ ಹುದ್ದೆಗಳನ್ನು ಭರ್ತಿಗೊಳಿಸಲು ಅನುಮತಿ ನೀಡಿ ಖಾಸಗಿ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಪ್ರಗತಿಗೆ ಅವಕಾಶ ಕಲ್ಪಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳುವುದೇ ;

(ಈ) ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುವುದು ; ಶಾಶ್ವತ ಅನುದಾನ ಸಹಿತ ಹುದ್ದೆಗಳಿದ್ದಾಗ್ಯೂ ಅವುಗಳನ್ನು ತುಂಬಲು ಅನುಮತಿ ನೀಡದಿರಲು ಕಾರಣವೇನು ;

(ಉ) ಎಲ್ಲಾ ಖಾಸಗಿ ಸಂಸ್ಥೆಗಳನ್ನು ಸರ್ಕಾರ ರಾಷ್ಟ್ರೀಕರಣಗೊಳಿಸಬಹುದೇ ?

## ಕ್ಲಸ್ಟರ್ ಹಂತದ ಸರ್ಕಾರಿ ಸಂಯುಕ್ತ ಪ್ರೌಢ ಶಾಲೆಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ವಿಭಾಗದ ಆಡಳಿತ ನಿರ್ವಹಣೆ ಕುರಿತು.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೨೩೨೭ (೨೬೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರದ ಆದೇಶ ಸಂ: ಇಡಿ/೧೯೯/ಡಿ.ಪಿ.ಐ/೨೦೦೭, ದಿನಾಂಕ: ೦೧.೦೮.೨೦೦೮ರ ಪ್ರಕಾರ ಕ್ಲಸ್ಟರ್ ಹಂತದ ಸರ್ಕಾರಿ ಪ್ರೌಢ ಶಾಲೆಗಳನ್ನು ಸಂಯುಕ್ತ ಪ್ರೌಢ ಶಾಲೆ ಎಂದು ಮಾರ್ಪಡಿಸಿ, ಆ ಶಾಲೆಯ ಮುಖ್ಯ ಶಿಕ್ಷಕರ ಹುದ್ದೆಯನ್ನು ಪದನಿಮಿತ್ತ ಸಹಾಯಕ ಶಿಕ್ಷಣಾಧಿಕಾರಿಗಳ ಹುದ್ದೆಗಳೆಂದು ಪದನಾಮಕರಣಗೊಳಿಸಿದ್ದನ್ನು ಯಾವ ದಿನಾಂಕದಿಂದ ಅನ್ವಯವಾಗುವಂತೆ ರದ್ದುಗೊಳಿಸಲಾಗಿದೆ ;

(ಆ) ರದ್ದಾದ ಸಂಯುಕ್ತ ಪ್ರೌಢ ಶಾಲೆಗಳ ಕಟ್ಟಡದ ಆವರಣದಲ್ಲಿರುವ ಪ್ರಾಥಮಿಕ ಶಾಲೆಗಳ ಸಿಬ್ಬಂದಿಗಳ ಆಡಳಿತ ನಿರ್ವಹಣೆಯನ್ನು ಪ್ರೌಢ ಶಾಲಾ ಮುಖ್ಯ ಶಿಕ್ಷಕರುಗಳಿಂದ ಹಿಂದೆ ಪಡೆದು ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವಹಿಸಿರುವುದು ನಿಜವೇ ;

(ಇ) ಆದರೆ, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಆರು ಸರ್ಕಾರಿ ಸಂಯುಕ್ತ ಪ್ರೌಢ ಶಾಲೆಗಳ ಆವರಣದಲ್ಲಿರುವ ಪ್ರಾಥಮಿಕ ಶಾಲೆಗಳ ಸಿಬ್ಬಂದಿಗಳ ಆಡಳಿತ ನಿರ್ವಹಣೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈವರೆಗೆ ವಹಿಸದಿರಲು ಕಾರಣಗಳೇನು ;

(ಈ) ಈ ಆರು ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರುಗಳು, ಪ್ರೌಢ ಶಾಲೆಯ ಆಡಳಿತದೊಂದಿಗೆ ಪ್ರಾಥಮಿಕ ವಿಭಾಗದ ಆಡಳಿತ ನಿರ್ವಹಣೆ ನಡೆಸುತ್ತಿದ್ದು, ಇದರಿಂದ ಕಾರ್ಯಭಾರದ ಒತ್ತಡ ಹೆಚ್ಚಾಗಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಉ) ಹಾಗಿದ್ದಲ್ಲಿ, ಪ್ರಾಥಮಿಕ ಶಾಲಾ ಸಿಬ್ಬಂದಿಗಳ ನಿರ್ವಹಣೆಯನ್ನು ಸಂಯುಕ್ತ ಪ್ರೌಢ ಶಾಲೆಗಳಿಂದ ಬೇರ್ಪಡಿಸಿ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವಹಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವುದೇ ?

## ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೨೮ (೨೮೧೮) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಬೃಹತ್ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳು ಸೋಮನಹಳ್ಳಿ ಮತ್ತು ಗೆಜ್ಜಲಗೆರೆಯಲ್ಲಿ ಇದ್ದು, ಇವುಗಳನ್ನು ಹೊರತುಪಡಿಸಿ ಬೇರೆ ಸ್ಥಳಗಳಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿಪಡಿಸಲು ಸ್ಥಳವನ್ನು ಗುರುತಿಸಲಾಗಿದೆಯೇ; ಹಾಗಿದ್ದಲ್ಲಿ, ಸ್ಥಳಗಳಲ್ಲಿ ವಿಳಾಸ ಸಹಿತ ಪೂರ್ಣ ಮಾಹಿತಿ ನೀಡುವುದು ;

(ಆ) ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆ ಮತ್ತು ಸೋಮನಹಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಎಷ್ಟು ಕಾರ್ಖಾನೆಗಳಿವೆ, ಅವುಗಳ ವಿಸ್ತೀರ್ಣವೆಷ್ಟು ; ಅದರ ಮಾಲೀಕರ ವಿವರ ಅಲ್ಲಿ ಉತ್ಪತ್ತಿಯಾಗುವ ಉತ್ಪನ್ನಗಳ ವಿವರ ಹಾಗೂ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು ; ಅದರಲ್ಲಿ ಮಹಿಳಾ ಕಾರ್ಮಿಕರೆಷ್ಟು ; ಹಾಗೂ ಪುರುಷ ಕಾರ್ಮಿಕರೆಷ್ಟು ; (ವಿವರ ನೀಡುವುದು)

## ಕುಡಿಯುವ ನೀರು ಸರಬರಾಜು ಕಾಮಗಾರಿ ವಿಳಂಬ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೨೯(೨೮೧೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಕೆ.ಬೆಳ್ಳೂರು ಹಾಗೂ ಇತರೆ ೩೩ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ತ್ವರಿತವಾಗಿ ಕಳೆದ ೫ ವರ್ಷಗಳಿಂದಲೂ ಸತತವಾಗಿ ಪ್ರಸ್ತಾಪಿಸುತ್ತಿದ್ದರೂ ಸಹ ಈವರೆಗೆ ಕಾಮಗಾರಿಯನ್ನು ಪೂರ್ಣಗೊಳಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದಕ್ಕೆ ಕಾರಣವೇನು ;

(ಆ) ವಿಳಂಬಕ್ಕೆ ಹೊಣೆ ಯಾರು, ಅಧಿಕಾರಿಗಳೇ ; ಅಥವಾ ಗುತ್ತಿಗೆದಾರರೇ ? (ಸಂಪೂರ್ಣ ವರದಿಯನ್ನು ನೀಡುವುದು)

## ರಾಜ್ಯದ ಕಳೆದ ಅವಧಿಯ ಗ್ರಾಮ ಪಂಚಾಯತಿಯ ಅಧ್ಯಕ್ಷರ / ಉಪಾಧ್ಯಕ್ಷರ ಗೌರವ ಧನದ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೩೦(೨೬೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಕಳೆದ ಅವಧಿಯ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಬಾಕಿ ನೀಡಬೇಕಾದ ಗೌರವಧನವನ್ನು ಇದುವರೆವಿಗೂ ಪಾವತಿ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ನೀಡಬೇಕಾಗಿರುವ ಗೌರವಧನ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ಹಾಗೂ ಸದರಿ ಗೌರವಧನವನ್ನು ಯವಾಗ ಬಿಡುಗಡೆ ಮಾಡಲಾಗುವುದು ? (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)

## ಎನ್.ಆರ್.ಇ.ಜಿ. ಯೋಜನೆಯಡಿ ಒಕ್ಕಲುತನ ಕಣ ನಿರ್ಮಿಸುವ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೩೩೧ (೨೬೯೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಎನ್.ಆರ್.ಇ.ಜಿ. ಯೋಜನೆಯಡಿ ಸರ್ಕಾರ ಚಿತ್ರದುರ್ಗ ಜಿಲ್ಲೆಯಲ್ಲಿ ರೈತರಿಗೆ ನೀರಿನ ತೊಟ್ಟಿ ನಿರ್ಮಾಣ, ಭೂಮಿ ಮಟ್ಟ ಮಾಡುವುದು ಹಾಗೂ ಒಕ್ಕಲುತನಕ್ಕೆ ಕಣ ನಿರ್ಮಾಣಕ್ಕಾಗಿ ಮಂಜೂರಾತಿ ನೀಡಿದೆಯೇ ;

(ಆ) ಸದರಿ ಯೋಜನೆಯಲ್ಲಿ ಮೇಲ್ಕಂಡ ಕಾಮಗಾರಿಗಳಿಗೆ ಅವಕಾಶ ಇದೆಯೇ ; ಇದ್ದಲ್ಲಿ ವಿವರ ನೀಡುವುದು ?

## ರಾಜ್ಯದ ಗ್ರಾಮ ಪಂಚಾಯತಿ, ಕಂದಾಯ ಅಧಿಕಾರಿಗಳ ನೇಮಕ ಕುರಿತು.

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೩೩೨ (೨೬೯೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಗ್ರಾಮ ಪಂಚಾಯ್ತಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಸದರಿ ಗ್ರಾಮ ಪಂಚಾಯತಿಗಳಿಗೆ ನೀಡುತ್ತಿರುವ ಸರ್ಕಾರದ ಅನುದಾನವೆಷ್ಟು ; ಹೊಸ ಸರ್ಕಾರ ಬಂದಾಗಿನಿಂದ ನೀಡಿರುವ ಅನುದಾನದ ಜಿಲ್ಲಾವಾರು ಮಾಹಿತಿ ನೀಡುವುದು ;

(ಇ) ಈ ಗ್ರಾಮ ಪಂಚಾಯ್ತಿಗಳಿಂದ ಇಲಾಖೆಗೆ ಬರುವ ಕಂದಾಯ ಮೂಲವೆಷ್ಟು; ಇದನ್ನು ಯಾವ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ ;

(ಈ) ರಾಜ್ಯದ ಎಲ್ಲಾ ಗ್ರಾಮಪಂಚಾಯತಿಗಳಿಗೆ ಕಾರ್ಯದರ್ಶಿ ಹಾಗೂ ಪಿ.ಡಿ.ಓ.ಗಳನ್ನು ನೇಮಕ ಮಾಡಲಾಗಿದೆಯೇ ; ಪಿ.ಡಿ.ಓ. ಗಳು ಇಲ್ಲದ ಕಡೆ ಆ ಜವಾಬ್ದಾರಿಗಳನ್ನು ಯಾರಿಗೆ ವಹಿಸಲಾಗಿರುತ್ತದೆ ; ಇನ್ನು ಎಷ್ಟು ಪಂಚಾಯಿತಿಗಳಿಗೆ ಪಿ.ಡಿ.ಓ.ಗಳ ಕೊರತೆಯಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಖಾಲಿ ಇರುವ ಕಾರ್ಯದರ್ಶಿ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಭರ್ತಿಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ; ಅದೇ ರೀತಿ ಈ ಪಿ.ಡಿ.ಒ.ಗಳಿಗೆ ಸ್ಮಾರ್ಟ್ ಪೋನ್, ಲ್ಯಾಪ್ ಟ್ಯಾಪ್ ಕೊಡುವ ಯೋಜನೆಯನ್ನು ಸರ್ಕಾರ ಅನುಷ್ಠಾನಗೊಳಿಸಿದೆಯೇ ; ಇದು ಯಾವಾಗಿನಿಂದ ಜಾರಿಗೆ ಬಂದಿರುತ್ತದೆ ;

(ಊ) ಇದರಿಂದ ಸರ್ಕಾರಕ್ಕೆ ಆಗಿರುವ ಖರ್ಚು ಎಷ್ಟು; ಯಾವ ಉದ್ದೇಶಕ್ಕೆ ಇದನ್ನು ವಿತರಣೆ ಮಾಡಲಾಗಿದೆ (ವಿವರ ನೀಡುವುದು)

## ಮರಳು ಗಣಿಗಾರಿಕೆ ಅಕ್ರಮದ ಕುರಿತು.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೨೩೩೩(೨೯೬೮) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮರಳು ಗಣಿಗಾರಿಕೆ ಅಕ್ರಮವಾಗಿ ನಡೆಯುತ್ತಿದ್ದು,

ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಯಾರು ಯಾರಿಗೆ, ಯಾವ ಯಾವ ಇಲಾಖೆಗೆ ಈ ಅಧಿಕಾರ ನೀಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ಸಾರ್ವಜನಿಕರಿಗೆ ಮರಳು ವಿತರಣೆಯು ಕೆಲವು ಜಿಲ್ಲೆಗಳಲ್ಲಿ ತೊಂದರೆಯಾಗುತ್ತಿದ್ದು, ವಿತರಣೆ ಮಾಡಲು ಸಂಬಂಧಿಸಿದವರಿಗೆ ಆದೇಶಿಸಲಾಗಿದೆಯೇ ? (ಸಂಪೂರ್ಣ ವಿವರ ನೀಡುವುದು)

## ಬೆಳಗಾವಿ ಡಿ.ಡಿ.ಪಿ.ಯ ಕಛೇರಿಯಲ್ಲಿರುವ ಸಿಬ್ಬಂದಿಗಳ ಕುರಿತು.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೨೩೩೪ (೨೯೦೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಡಿ.ಡಿ.ಪಿ.ಯ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಒಟ್ಟು ಸಂಖ್ಯೆ ಎಷ್ಟು; (ಹುದ್ದೆವಾರು ಕಳೆದ ೧೫ ವರ್ಷಗಳಲ್ಲಿ ಈ ಸಿಬ್ಬಂದಿಗಳು ಎಲ್ಲಿ ಎಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆಂಬುದರ ವಿವರ ನೀಡುವುದು)

(ಆ) ಈ ಕಛೇರಿಯಲ್ಲಿ ಬಾಹ್ಯ ಮೂಲದ/ಹೊರ ಗುತ್ತಿಗೆಯ/ಅನಧಿಕೃತ ವ್ಯಕ್ತಿಗಳು ಕಾರ್ಯ ನಿರ್ವಹಿಸುತ್ತಿರುವುದು ನಿಜವೇ ;

(ಇ) ಈ ಹಿಂದೆ ಈ ಡಿ.ಡಿ.ಪಿ.ಯ ಕಛೇರಿಯಲ್ಲಿ ಲೋಕಾಯುಕ್ತ ಟ್ರ್ಯಾಪ್ ಆದ ಸಿಬ್ಬಂದಿಯು ಡಿ.ಡಿ.ಪಿ.ಯ ಕಛೇರಿ ಸಿಬ್ಬಂದಿಯೋ ಅಥವಾ ಬೇರೆ ಯಾರು ; (ವಿವರ ನೀಡುವುದು)

(ಈ) ಈ ಕಛೇರಿಯಲ್ಲಿ ಸಿಬ್ಬಂದಿಯ ಅಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲಾಗುವುದು ?

## ಸಿ.ಸಿ.ಇ. ಪದ್ದತಿಯ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೨೩೩೫ (೨೯೧೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಿ.ಸಿ.ಇ ಪದ್ಧತಿಯನ್ನು ಯಾವ ವರ್ಷದಿಂದ ಅಳವಡಿಸಿಕೊಳ್ಳಲಾಗಿದೆ ;

(ಆ) ಈ ಪದ್ಧತಿಯ ಪರಿಣಾಮಕಾರಿ ಅನುಷ್ಠಾನಕ್ಕೆ ವಿದ್ಯಾರ್ಥಿ/ಶಿಕ್ಷಕರ ಅನುಪಾತ ಎಷ್ಟಿರಬೇಕು ;

(ಇ) ಸಿ.ಸಿ.ಇ. ಯಲ್ಲಿ ಅತಿ ಹೆಚ್ಚು ಒತ್ತಡ ನಿರ್ಮಾಣವಾಗಿದ್ದು ಅದರ ಸೂಕ್ತ ಮಾರ್ಪಾಡಿಗೆ ಸರ್ಕಾರದ ನಿಲುವೇನು ;

(ಈ) ಈಗಿರುವ ಪಠ್ಯ ಕ್ರಮಗಳು ಸಿ.ಸಿ.ಇ ಮಾದರಿಯ ಬೋಧನೆಗೆ ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ರಾಜ್ಯದಲ್ಲಿ ಪಠ್ಯಕ್ರಮ ಪಠ್ಯ ಪುಸ್ತಕ ಕರ್ನಾಟಕ ಕೆರಿಕ್ಯುಲಮ್ ಫ್ರೇಮ್ ವರ್ಕ್ ಬದಲಾವಣೆಗೆ ಸರ್ಕಾರ ಚಿಂತನೆ ನಡೆಸಿದೆಯೇ ? (ಸಂಪೂರ್ಣ ವಿವರ ನೀಡುವುದು)

## ಮಲದೇವಿಹಳ್ಳಿ ಗ್ರಾಮಕ್ಕೆ ಮೂಲಭೂತ ಸೌಲಭ್ಯ ನೀಡುವ ಕುರಿತು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೩೬(೨೭೦೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೇಲೂರು ತಾಲ್ಲೂಕು ಜಾವಗಲ್ ಹೋಬಳಿ ನೇರ್ಲಿಗೆ ಪಂಚಾಯಿತಿಗೆ ಸೇರಿದ ಮಲದೇವಿಹಳ್ಳಿ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಜನರು ವಾಸಿಸುತ್ತಿದ್ದು, ಈ ಗ್ರಾಮದಲ್ಲಿ ಇರುವ ಜನಸಂಖ್ಯೆ ಎಷ್ಟು ;

(ಆ) ಸದರಿ ಗ್ರಾಮದಿಂದ ರಾಷ್ಟ್ರೀಯ ಹೆದ್ದಾರಿ ಸಂಪರ್ಕ ರಸ್ತೆ ಸಂಪೂರ್ಣ ಹಾಳಾಗಿದ್ದು ರಸ್ತೆ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು ;

(ಇ) ಮಲದೇವಿಹಳ್ಳಿ ಗ್ರಾಮದಲ್ಲಿ ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆ, ಚರಂಡಿ ವ್ಯವಸ್ಥೆ, ಬೀದಿ ದೀಪಗಳ ವ್ಯವಸ್ಥೆ ಸಮರ್ಪಕವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಇವುಗಳ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು ?

## ಹಾಸನ ಜಿಲ್ಲೆಯಲ್ಲಿ ಕುಡಿಯುವ ನೀರನ್ನು ಒದಗಿಸುವ ಕುರಿತು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೩೭(೨೭೦೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾಸನ ನಗರ ಮತ್ತು ಸುತ್ತಮುತ್ತಲಿನ ಹಳ್ಳಿಗಳಿಗೆ ಕುಡಿಯುವ ನೀರನ್ನು ಯಾವ ಮೂಲಗಳಿಂದ ಒದಗಿಸಲಾಗುತ್ತಿದೆ ;

(ಆ) ಹಾಸನ ನಗರ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಹೇಮಾವತಿ ನೀರನ್ನು ಒದಗಿಸಲು ನೂತನ ಯೋಜನೆ ರೂಪಿಸಲಾಗಿದೆಯೇ ; ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು ;

(ಇ) ಹಾಸನ ಜಿಲ್ಲೆಯ ಅರಸೀಕರೆ, ಬೇಲೂರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಅಭಾವವಿದ್ದು ಇದನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಮುಚ್ಚಲಾಗುತ್ತಿರುವ ಸರ್ಕಾರಿ ಶಾಲೆಗಳು ಮತ್ತು ಪರಿಹಾರ ಕ್ರಮ

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೩೩೮ (೨೭೦೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳು ಎಷ್ಟು; (ಜಿಲ್ಲಾವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಸರ್ಕಾರಿ ಶಾಲೆಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ ಕಳೆದ ೩ ವರ್ಷಗಳ ಅವಧಿಯಲ್ಲಿ ಸರ್ಕಾರಿ ಶಾಲೆಗಳ ವಿಲೀನ, ಶಾಲೆಗಳನ್ನು ಮುಚ್ಚುವಂತಹ ಪ್ರಕರಣಗಳು ಎಷ್ಟು; (ಪ್ರತ್ಯೇಕವಾದ ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಇ) ಕಳೆದ ೩ ವರ್ಷಗಳ ಅವಧಿಯಲ್ಲಿ ಸರ್ಕಾರಿ ಅನುದಾನಕ್ಕೆ ಒಳಪಟ್ಟ ಶಾಲೆಗಳು ಎಷ್ಟು; ಅವುಗಳಿಗೆ ಒದಗಿಸಲಾದ ಅನುದಾನ ಪ್ರಮಾಣ ಎಷ್ಟು; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಈ) ಸರ್ಕಾರಿ ಶಾಲೆಗಳಿಗೆ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕಂಡುಕೊಂಡ ಅಂಶಗಳು ಮತ್ತು ಕೈಗೊಂಡ ಪರಿಹಾರ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವುದು?

## ಗ್ರಾಮ ಪಂಚಾಯತ್ ಗಳಲ್ಲಿ ಶೇ. ೨೫ (ಪ.ಜಾ/ಪ.ಪಂಗಡ ಕಲ್ಯಾಣ) ನಿಧಿ ಬಳಕೆ ಕುರಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೩೯ (೨೮೨೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿವಿಧ ಗ್ರಾಮ ಪಂಚಾಯತ್ ಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಕಾಯ್ದಿರಿಸಿದ ಹಾಗೂ ಖರ್ಚಾದ ಅನುದಾನ ಎಷ್ಟು; (ವರ್ಷವಾರು ಜಿಲ್ಲೆ–ತಾಲ್ಲೂಕು–ಗ್ರಾಮಪಂಚಾಯತ್‌ವಾರು ವಿವರ ನೀಡುವುದು)

(ಆ) ಇತ್ತೀಚೆಗೆ ಸರ್ಕಾರದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಲ್ಯಾಣ ನಿಧಿ ಬಳಕೆ ಮಾರ್ಗಸೂಚಿ ಹೊರಡಿಸಲಾಗಿದ್ದು, ಮಾರ್ಗಸೂಚಿಯಲ್ಲಿರುವ ಕಾರ್ಯಕ್ರಮ ಹೊರತುಪಡಿಸಿ ಉಳಿದವುಗಳ ಅನುಷ್ಠಾನಕ್ಕೆ ಜಿಲ್ಲಾ ಪಂಚಾಯತ್ CEO ಅನುಮತಿ ಕಡ್ಡಾಯಗೊಳಿಸಿರುವುದು ಪಂಚಾಯತ್ ರಾಜ್ ಕಾಯ್ದೆಯ ಆಶಯಕ್ಕೆ ಧಕ್ಕೆ ಬರುವುದು ಸರ್ಕಾರ ಗಮನಿಸಿದೆಯೇ ;

(ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿ ಬಳಕೆಯ ಬಗ್ಗೆ ಗ್ರಾಮ ಪಂಚಾಯತ್ ಹಂತದಲ್ಲೇ ನಿರ್ಣಯ ಕೈಗೊಂಡು ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ವಿವರ ನೀಡುವುದು)

## ಗ್ರಾಮ ಪಂಚಾಯತ್ ಪ್ರತಿನಿಧಿಗಳ ಮೇಲೆ ದಾಖಲಾದ ಪ್ರಕರಣಗಳ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೪೦ (೨೮೨೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಗ್ರಾಮ ಪಂಚಾಯತ್/ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳ ಮೇಲೆ ದಾಖಲಾದ ಪ್ರಕರಣಗಳೆಷ್ಟು ; (ಜಿಲ್ಲಾವಾರು–ತಾಲ್ಲೂಕುವಾರು ವಿವರ ನೀಡುವುದು)

(ಆ) ಗ್ರಾಮ ಪಂಚಾಯತ್ ಜನಪ್ರತಿನಿಧಿಗಳು ಸ್ಥಳ ಪರಿಶೀಲನೆ ಮತ್ತಿತರ ಕಾನೂನು ಬದ್ಧ ಅಧಿಕಾರ ಚಲಾವಣೆ ಸಂದರ್ಭದಲ್ಲಿ ಸುಳ್ಳು ದೂರುಗಳು ಅವರ ಮೇಲೆ ದಾಖಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಗ್ರಾಮ ಪಂಚಾಯತ್ ಪ್ರತಿನಿಧಿಗಳು ತಮ್ಮ ಕಾನೂನುಬದ್ಧ ಅಧಿಕಾರ ಚಲಾಯಿಸುವ ಸಂದರ್ಭದಲ್ಲಿ ಬೆದರಿಕೆ ಮತ್ತು ಸುಳ್ಳು ದೂರು ದಾಖಲಾಗುವುದನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯತ್ ಜನಪ್ರತಿನಿಧಿಗಳಿಗೆ ರಕ್ಷಣೆ ಒದಗಿಸಲು ಯಾವ ಕ್ರಮ ಕೈಗೊಳ್ಳಲಿದೆ ? (ಸಂಪೂರ್ಣ ವಿವರ ನೀಡುವುದು)

## ಹೊಸ ಗ್ರಾಮ ಪಂಚಾಯಿತಿಗಳಲ್ಲಿ ಮೂಲ ಸೌಕರ್ಯ ಕೊರತೆ ಮತ್ತು ಆಡಳಿತಾತ್ಮಕ ಸಮಸ್ಯೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೪೧ (೨೭೦೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯತ್‌ಗಳ ಸಂಖ್ಯೆ ಎಷ್ಟು ; ಇದರಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಗ್ರಾಮ ಪಂಚಾಯತ್‌ಗಳೆಷ್ಟು ;

(ಆ) ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಗ್ರಾಮ ಪಂಚಾಯತ್‌ಗಳಿಗೆ ಸರ್ಕಾರದಿಂದ ಒದಗಿಸಲಾಗಿರುವ ಮೂಲ ಸೌಕರ್ಯಗಳು ಯಾವುದು ; (ಸಂಪೂರ್ಣ ವಿವರ ನೀಡುವುದು)

(ಇ) ಹೊಸ ಗ್ರಾಮ ಪಂಚಾಯತ್‌ಗಳಲ್ಲಿ ಕಛೇರಿ ಕಟ್ಟಡ, ಅಗತ್ಯ ಸಂಖ್ಯೆಯ ಕಂಪ್ಯೂಟರ್, ತೆರಿಗೆ ರಶೀದಿ ಪುಸ್ತಕ ಪೀಠೋಪಕರಣಗಳನ್ನು ಲಭ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹೊಸ ಗ್ರಾಮ ಪಂಚಾಯತ್‌ಗಳ ಮೂಲ ಸೌಕರ್ಯವೂ ಸೇರಿದಂತೆ, ಇ–ಸ್ವತ್ತು, ಪಂಚತಂತ್ರ ಖಾತೆ ಇನ್ನಿತರ ಆಡಳಿತಾತ್ಮಕ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ಸಂಪೂರ್ಣ ವಿವರ ನೀಡುವುದು)

## ಮೊಬೈಲ್ ಟವರ್‌ಗಳಿಗೆ ಶುಲ್ಕ/ತೆರಿಗೆ ವಿಧಿಸಿ, ವಸೂಲಿ ಮಾಡುವ ಬಗ್ಗೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೪೨ (೨೮೯೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಂಚಾಯತ್ ರಾಜ್ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿರುವ ಮಾದರಿ ಉಪವಿಧಿಯಲ್ಲಿ 'ಮೊಬೈಲ್ ಟವರ್' ನ್ನು ಸೇರಿಸಲಾಗಿದೆಯೇ ; ಹೌದಾದಲ್ಲಿ ಪ್ರತಿ ಒದಗಿಸುವುದು ;

(ಆ) ರಾಜ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ಯಾವ –ಯಾವ ಗ್ರಾಮಪಂಚಾಯತ್‌ಗಳು ಮೊಬೈಲ್ ಸ್ಥಾವರಗಳಿಗೆ ತೆರಿಗೆ ವಿಧಿಸಿ– ವಸೂಲಿ ಮಾಡಲಾಗುತ್ತದೆ ; (ಗ್ರಾಮ ಪಂಚಾಯಿತಿವಾರು ವಿವರ ಒದಗಿಸುವುದು)

(ಇ) ಗ್ರಾಮ ಪಂಚಾಯತ್‌ಗಳು ಮೊಬೈಲ್ ಟವರ್‌ಗಳಿಗೆ ತೆರಿಗೆ ವಿಧಿಸಲು ಹಾಗೂ ವಸೂಲಿ ಮಾಡಲು ಇರುವ ತೊಡಕುಗಳೇನು ;

(ಈ) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಮೊಬೈಲ್ ಟವರ್ ಹಾಗೂ ಇನ್ನಿತರ ರಚನೆಗಳನ್ನು ತೆರಿಗೆ ವ್ಯಾಪ್ತಿಗೆ ತರುವ ಸಂಬಂಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ; ಯಾವಾಗ ಈ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು ? (ಸಂಪೂರ್ಣ ವಿವರ ನೀಡುವುದು)

## ರೂರಲ್ ಡೆವಲಪ್‌ಮೆಂಟ್ ಹುದ್ದೆಗಳನ್ನು ಸೃಜಿಸುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೪೩(೨೮೨೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆರ್.ಡಿ.ಪಿ.ಆರ್ ಇಲಾಖೆಯಲ್ಲಿ ಒಟ್ಟು ಎಷ್ಟು ರೂರಲ್ ಡೆವಲಪ್‌ಮೆಂಟ್ ಆಫೀಸರ್ ಹುದ್ದೆ ಸೃಜಿಸಲಾಗಿದೆ ;

(ಆ) ಆರ್.ಡಿ.ಓ ಹುದ್ದೆಯ ನೇಮಕಾತಿಯ ಪ್ರಸ್ತಾವನೆ ಸರ್ಕಾರದ ಮುಂದಿರುವುದು ನಿಜವೇ ; (ಪ್ರಸ್ತಾವನೆಯ ಹಂತದ ವಿವರ ನೀಡುವುದು)

(ಇ) ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯಿಂದ ಆರ್.ಡಿ.ಓ ಹುದ್ದೆಗಳಿಗೆ ಪದೋನ್ನತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಆರ್.ಡಿ.ಓ ಹುದ್ದೆಗಳನ್ನು ನೇರ ನೇಮಕಾತಿ ಇನ್ನಿತರ ಮೂಲಗಳಿಂದ ಯಾವಾಗ ಭರ್ತಿಗೊಳಿಸಲಾಗುವುದು ; ಈ ಬಗ್ಗೆ ಸರ್ಕಾರದ ನಿಲುವೇನು ? (ಸಂಪೂರ್ಣ ವಿವರ ನೀಡುವುದು)

**ಕಳೆದ ೩ ವರ್ಷಗಳಲ್ಲಿ  ವಸತಿ ನಿಗಮದಿಂದ ವಸತಿ ರಹಿತರ ಬಗ್ಗೆ**

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೪೪ (೨೯೦೧) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ವಸತಿ ನಿಗಮದಿಂದ ರಾಜ್ಯಾದ್ಯಂತ ವಸತಿರಹಿತರಿಗೆ ವಿತರಿಸಿದ ನಿವೇಶನಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಹಾಗೂ ಹಾವೇರಿ ಜಿಲ್ಲೆಯ ಗ್ರಾಮ ಪಂಚಾಯತ್‌ವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ನಿವೇಶನ ಹಕ್ಕು ಪತ್ರ ಮತ್ತು ನಿವೇಶನ ಹಸ್ತಾಂತರ ಮಾಡಿದ ಎಷ್ಟು ದಿನದ ಒಳಗೆ ಫಲಾನುಭವಿಯು ಸದರಿ ನಿವೇಶನದಲ್ಲಿ ಮನೆ ನಿರ್ಮಿಸಿಕೊಳ್ಳಬೇಕು ಹಾಗೂ ಈ ಸಂಬಂಧ ಇರುವ ಇತರೆ ಷರತ್ತುಗಳು ಯಾವುವು ;

(ಇ) ನಿಗದಿತ ಅವಧಿಯೊಳಗೆ ಮನೆ ನಿರ್ಮಿಸಿಕೊಳ್ಳದಿದ್ದಲ್ಲಿ ಹಾಗೂ ಇತರ ಷರತ್ತು ಉಲ್ಲಂಘನೆಯ ಪ್ರಕರಣದಲ್ಲಿ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುತ್ತದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ವಸತಿ ನಿಗಮದಿಂದ ವಸತಿರಹಿತ ಬಡವರಿಗೆ ವಿತರಿಸಿರುವ ನಿವೇಶನದಲ್ಲಿ ನಿಗಮದಿಂದ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ; (ತಾಲ್ಲೂಕುವಾರು ಹಾವೇರಿ ಜಿಲ್ಲೆಯ ಗ್ರಾಮ ಪಂಚಾಯತ್ ವಾರು ಸಂಪೂರ್ಣ ಮಾಹಿತಿ ನೀಡುವುದು)

(ಉ) ಕೇವಲ ನಿವೇಶನ ಮಂಜೂರಾಗಿ ಸರ್ಕಾರದ ಸಹಾಯಧನಕ್ಕಾಗಿ ಕಾಯುತ್ತಿರುವ ಬಡವರ ನಿವೇಶನವು ಖಾಲಿ ಬಿದ್ದಿರುವುದು ಹಾಗೂ ಇತರ ಪ್ರಭಾವಿಗಳಿಂದ ಒತ್ತುವರಿ ಆಗುತ್ತಿರುವುದು, ನಿವೇಶನಗಳ ಅನಧಿಕೃತ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ನಮ್ಮ ಹೊಲ ನಮ್ಮ ರಸ್ತೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೪೫ (೨೭೦೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರಿಗೆ ವರವಾಗಿ ಪರಿಣಮಿಸಿರುವ "ನಮ್ಮ ಹೊಲ ನಮ್ಮ ರಸ್ತೆ" ಕಾರ್ಯಕ್ರಮದಡಿಯಲ್ಲಿ ಎಷ್ಟು ಅರ್ಜಿಗಳು ಬಂದಿವೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಕಾರವಾರ ಜಿಲ್ಲೆ ಹೊನ್ನಾವರ ಹಾಗೂ ಭಟ್ಕಳ ತಾಲ್ಲೂಕಿನಲ್ಲಿ ರೈತರಿಂದ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಹೆಸರು ಸಹಿತ ಮಂಜೂರಾದ ಹಣದ ವಿವರ ಒದಗಿಸುವುದು)

(ಇ) ಯಾವ ಕಾಲ ಮಿತಿಯಲ್ಲಿ ಈ ರಸ್ತೆ ಕಾರ್ಯ ಮುಗಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ರಾಜ್ಯದಲ್ಲಿ ನೂತನ ಗ್ರಾಮ ಪಂಚಾಯಿತಿಗಳ ಸಂಖ್ಯೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೩೪೬ (೨೮೩೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಈ ಬಾರಿ ರಚನೆಯಾಗಿರುವ ನೂತನ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹಾವೇರಿ ಜಿಲ್ಲೆಗೆ ಹೊಸದಾಗಿ ಮಂಜೂರಾದ ಗ್ರಾಮ ಪಂಚಾಯತ್‌ಗಳೆಷ್ಟು ; ಈ ಹೊಸ ಗ್ರಾಮ ಪಂಚಾಯತಿಗಳಿಗೆ ಕಟ್ಟಡ, ಪೀಠೋಪಕರಣ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಕೈಗೊಂಡ ಕ್ರಮವೇನು ;

(ಇ) ಹಾವೇರಿ ಜಿಲ್ಲೆಯಲ್ಲಿ ಪ್ರಸಕ್ತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನ ಮಾಡಿದ ಯೋಜನೆಗಳಾವುವು ; (ವಿವರ ನೀಡುವುದು)

(ಈ) ಅನುಷ್ಠಾನ ಮಾಡಿದ ಯೋಜನೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳೆಷ್ಟು; ವೆಚ್ಚ ಮಾಡಿದ ಹಣವೆಷ್ಟು; (ಯೋಜನಾವಾರು ತಾಲ್ಲೂಕುವಾರು ವಿವರ ನೀಡುವುದು)

(ಉ) ಪ್ರಸಕ್ತ ರಾಜ್ಯದಲ್ಲಿ ಜೀತ ಪದ್ಧತಿ ಜಾರಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಕಳೆದ ೩ ವರ್ಷದಿಂದ ಪತ್ತೆಯಾಗಿರುವ ಪ್ರಕರಣಗಳೆಷ್ಟು; ಇದರ ಬಗ್ಗೆ ಸರ್ಕಾರದ ಕ್ರಮಗಳೇನು ; ಸಂಪೂರ್ಣವಾಗಿ ಜೀತ ಪದ್ಧತಿಯ ನಿರ್ಮೂಲನೆ

ಬಗ್ಗೆ ಕೈಗೊಂಡ ಕಾರ್ಯಕ್ರಮಗಳೇನು ; (ಹಾವೇರಿ ಜಿಲ್ಲೆ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಊ) ಹಾವೇರಿ ಜಿಲ್ಲೆಗೆ ಕುಡಿಯುವ ನೀರಿನ ಯೋಜನೆಗೆ ಸರ್ಕಾರದಿಂದ ಬಂದ ಅನುದಾನ ಎಷ್ಟು; ಖರ್ಚಾದ ಅನುದಾನ ಎಷ್ಟು ; ಉಳಿದ ಅನುದಾನ ಎಷ್ಟು ; (೨೦೧೩-೧೪ರಿಂದ ಇಲ್ಲಿಯವರೆಗೆ ಸಂಪೂರ್ಣ ವಿವರ ನೀಡುವುದು)

(ಋ) ಹಾವೇರಿ ಜಿಲ್ಲೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಮಂಜೂರಾದ ನೀರಿನ ಘಟಕ ಎಷ್ಟು ? ಅನುಷ್ಠಾನಗೊಳಿಸಲಾಗಿದೆಯೇ ; ಅನುಷ್ಠಾನಗೊಳಿಸಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ? (೨೦೧೩-೧೪ ರಿಂದ ಇಲ್ಲಿಯವರೆಗೆ ಸಂಪೂರ್ಣ ವಿವರ ನೀಡುವುದು)

## ಕ್ಷೀರಭಾಗ್ಯ ಯೋಜನೆಯ ಬಗ್ಗೆ.

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೨೩೪೭ (೨೮೩೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕ್ಷೀರಭಾಗ್ಯ ಯೋಜನೆಯಲ್ಲಿ ಶಾಲಾ ಮಕ್ಕಳಿಗೆ ಪೂರೈಸುತ್ತಿರುವ ಹಾಲು ಕುಡಿದರೆ ಮಕ್ಕಳು ದಪ್ಪಗಾಗುವುದು ಮತ್ತು ಹೊಟ್ಟೆನೋವು ಬರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಇಂತಹ ಹಾಲು ಪೂರೈಸುವವರ ವಿರುದ್ಧ ಏನಾದರೂ ಕ್ರಮ ತೆಗೆದುಕೊಂಡಿರುವಿರಾ ;

(ಇ) ಇದಕ್ಕೆ ಪರ್ಯಾಯ ವ್ಯವಸ್ಥೆ ಏನು ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದ ಗಣಿ ಕಂಪನಿಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೩೪೪ (೨೮೩೧) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಗಣಿ ಕಂಪನಿಗಳು ಎಷ್ಟು ; ಮತ್ತು ಅವು ಯಾವುವು ; ಯಾವ ಯಾವ ಜಿಲ್ಲೆಯಲ್ಲಿ ಇವೆ ; (ಕಂಪನಿ ಹೆಸರು ಮತ್ತು ಮಾಲೀಕರ ಹೆಸರಿನೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಇವರಿಂದ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಬಾಕಿ ಏನಾದರೂ ಇದೆಯೇ ; ಇದ್ದರೆ ಯಾವ ಯಾವ ಗಣಿ ಕಂಪನಿಗಳ ಬಾಕಿ ಎಷ್ಟು ಇರುತ್ತದೆ ? (ಗಣಿ ಕಂಪನಿಗಳ ಬಾಕಿವಾರು ಸಂಪೂರ್ಣ ಮಾಹಿತಿ ಒದಗಿಸುವುದು)

## ಬೆಂಗಳೂರಿನ ಡಿ.ಜೆ ಸರ್ಕಾರಿ ಶಾಲೆಯ ಮೂಲಭೂತ ಸೌಲಭ್ಯ ಕುರಿತು

**ಶ್ರೀ ಸಯದ್ ಮುಧೀರ್ ಆಗಾ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೩೪೫ (೨೮೧೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಡಿ.ಜೆ. ಹಳ್ಳಿಯಲ್ಲಿ ಸುಮಾರು ೨೦೦೦ಕ್ಕೂ ಹೆಚ್ಚು ಅಲ್ಪ ಸಂಖ್ಯಾತ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಸರ್ಕಾರಿ ಉರ್ದು ಶಾಲೆಯು ಕಟ್ಟಡದಲ್ಲಿ ೧ನೇ ತರಗತಿಯಿಂದ ಪಿ.ಯು.ಸಿ.ವರೆಗೆ ತರಗತಿಗಳು ನಡೆಯುತ್ತಿರುವುದು ನಿಜವಲ್ಲವೆ ;

(ಆ) ಸದರಿ ಸರ್ಕಾರಿ ಶಾಲೆಯ ಕಟ್ಟಡದಲ್ಲಿ ಅಗತ್ಯ ಮೂಲಭೂತ ಸೌಲಭ್ಯವಿಲ್ಲದೇ ೨೦೦೦ ವಿದ್ಯಾರ್ಥಿ ಹಾಗೂ ಕೆಲಸ

ನಿರ್ವಹಿಸುತ್ತಿರುವ ೪೫ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಗಳಿಗೆ ಕೇವಲ ೪ ಶೌಚಾಲಯಗಳಿರುವುದು ಹಾಗೂ ಕುಡಿಯುವ ನೀರಿನ ಸೌಲಭ್ಯವಿಲ್ಲದೇ ಇರುವುದರಿಂದ ಸದರಿ ಶಾಲೆಯ ವಿದ್ಯಾರ್ಥಿ / ವಿದ್ಯಾರ್ಥಿನೀಯರು ಹಾಗೂ ಸಿಬ್ಬಂದಿಗಳು ತೊಂದರೆ ಅನುಭವಿಸುತ್ತಿರುವುದನ್ನು ಹೋಗಲಾಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ;

(ಇ) ಪ್ರತಿ ಶಾಲೆಗಳಿಗೆ ಸಮರ್ಪಕ ಮೂಲಭೂತ ಸೌಲಭ್ಯ ಒದಗಿಸಬೇಕೆಂದು ಮಾನ್ಯ ಉಚ್ಚ ನ್ಯಾಯಾಲಯವು ಆದೇಶಿಸಿದರೂ ಸಹ ಸರ್ಕಾರವು ಸದರಿ ಉರ್ದು ಶಾಲೆಗೆ ಸಮರ್ಪಕ ಮೂಲಭೂತ ಸೌಲಭ್ಯ ಒದಗಿಸದೇ ಇರಲು ಕಾರಣಗಳೇನು ;

(ಈ) ಸದರಿ ಶಾಲೆಗೆ ೨೦೦೫ರಿಂದ ಈವರೆವಿಗೂ ಕಟ್ಟಡ ನಿರ್ವಹಣೆ ಹಾಗೂ ಮೂಲಭೂತ ಸೌಲಭ್ಯಕ್ಕಾಗಿ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಸದರಿ ಹಣದಲ್ಲಿ ಈವರೆವಿಗೂ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಪ್ರಸ್ತುತ ಸದರಿ ಶಾಲೆಗೆ ಮೂಲಭೂತ ಸೌಲಭ್ಯ ಒದಗಿಸಲು ಸರ್ಕಾರವು ಯಾವ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ ?

## ರಾಮನಗರ ಜಿಲ್ಲೆಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೩೫೦ (೨೮೩೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಆ ಪೈಕಿ ಮಂಜೂರಾತಿ ನೀಡಲಾಗಿರುವ ಯೋಜನೆಗಳೆಷ್ಟು ಹಾಗೂ ಅವುಗಳು ಯಾವ ಹಂತದಲ್ಲಿವೆ ; (ವಿವರ ನೀಡುವುದು)

(ಇ) ಮಂಜೂರಾತಿಗೆ ಕಾಯುತ್ತಿರುವ ಯೋಜನೆಗಳಾವುವು ಹಾಗೂ ಪೂರ್ಣಗೊಂಡ ಯೋಜನೆಗಳಾವುವು ; (ತಾಲ್ಲೂಕುವಾರು ಪೂರ್ಣ ವಿವರ ನೀಡುವುದು)

(ಈ) ಮಂಜೂರಾತಿ ನೀಡಿರುವ ಹಾಗೂ ಚಾಲ್ತಿಯಲ್ಲಿರುವ ಯೋಜನೆಗಳಿಗೆ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಉ) ಬಾಕಿ ಇರುವ ಯೋಜನೆಗಳಿಗೆ ಯಾವಾಗ ಮಂಜೂರಾತಿ ನೀಡಲಾಗುವುದು ?

## ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಗ್ರೂಪ್ 'ಡಿ' ನೌಕರರನ್ನು ನೇಮಿಸುವ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೫೧ (೨೮೩೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳೆಷ್ಟು ; ಈ ಎಲ್ಲಾ ಶಾಲಾ ಕಟ್ಟಡಗಳಿಗೆ ಮೂಲಭೂತ ಸೌಲಭ್ಯಗಳಲ್ಲಿ ಒಂದಾದ ಶೌಚಾಲಯದ ಸೌಲಭ್ಯ ನೀಡಲಾಗಿದೆಯೇ ;

(ಆ) ಸದರಿ ಶಾಲೆಗಳಿಗೆ ಪ್ರತಿ ಶಾಲೆಗೆ ಗ್ರೂಪ್ 'ಡಿ' ನೌಕರರನ್ನು ನೇಮಿಸಲಾಗಿದೆಯೇ ; ಗ್ರೂಪ್ 'ಡಿ' ನೌಕರರನ್ನು ಹೊಂದಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳೆಷ್ಟು ; ಗ್ರೂ 'ಡಿ' ನೌಕರರನ್ನು ಹೊಂದಿರದೇ ಇರುವಂತಹದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಎಷ್ಟು ;

(ಇ) ಗ್ರೂಪ್ 'ಡಿ' ನೌಕರರನ್ನು ಹೊಂದಿರದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಾಲಾ ಶಿಕ್ಷಕರು ಅನಿವಾರ್ಯವಾಗಿ ವಿದ್ಯಾರ್ಥಿಗಳನ್ನೇ ಶೌಚಾಲಯ ತೊಳೆಯಲು ಮತ್ತು ಆಟದ ಮೈದಾನ ಸ್ವಚ್ಛ ಗೊಳಿಸಲು ಬಳಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಗ್ರೂಪ್ 'ಡಿ' ನೌಕರರನ್ನು ಹೊಂದಿರದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ತೊಳೆಯಲು ಹಾಗೂ ಆಟದ ಮೈದಾನ ಸ್ವಚ್ಛಗೊಳಿಸಲು ಯಾವ ಕ್ರಮ ಕೈಗೊಳ್ಳಲು ಸರ್ಕಾರವು ನಿರ್ದೇಶಿಸಿದೆ ;

(ಉ) ಎಲ್ಲಾ ಶಾಲೆಗಳಿಗೆ ಗ್ರೂಪ್ 'ಡಿ' ನೌಕರರನ್ನು ನೇಮಿಸಲು ಸರ್ಕಾರವು ಯಾವ ಕ್ರಮ ಕೈಗೊಳ್ಳಲಾಗುತ್ತಿದೆ ?

## ಶಿಕ್ಷಣಾಧಿಕಾರಿಗಳ ಜ್ಯೇಷ್ಠತಾ ಪಟ್ಟಿ ಹಾಗೂ ಮುಂಬಡ್ತಿ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೫೨ (೨೮೧೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಗ್ರೂಪ್–ಎ ವೃಂದದ ಕ್ಷೇತ್ರ ಶಿಕ್ಷಣಾಧಿಕಾರಿ/ತತ್ಸಮಾನ ಹುದ್ದೆಗಳಿಗೆ ಸಂಬಂಧಿಸಿದಂತೆ ಸ್ಥಳೀಯ ವೃಂದ (ಹೈದರಾಬಾದ್–ಕರ್ನಾಟಕ) ಹಾಗೂ ಮೂಲ ವೃಂದ (ನಾನ್ ಹೈದರಾಬಾದ್–ಕರ್ನಾಟಕ)ದ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗಿದೆಯೇ ; ಪ್ರಕಟಿಸಿದ್ದರೆ ಅವುಗಳ ಪ್ರತಿಯನ್ನು ಒದಗಿಸುವುದು ; ಇಲ್ಲದಿದ್ದರೆ, ವಿಳಂಬಕ್ಕೆ ಕಾರಣವೇನು ; ಹಾಗೂ ಯಾವಾಗ ಪ್ರಕಟಿಸಲಾಗುವುದು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕ್ಷೇತ್ರ ಶಿಕ್ಷಣಾಧಿಕಾರಿ/ತತ್ಸಮಾನ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಸ್ಥಳೀಯ ವೃಂದಕ್ಕೆ ಮೀಸಲಿರುವ ಹುದ್ದೆಗಳ ಸಂಖ್ಯೆ ಎಷ್ಟು; ಆ ಪೈಕಿ ಖಾಲಿ ಇರುವ ಹಾಗೂ ಭರ್ತಿ ಮಾಡಲಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; (ಸ್ಥಳೀಯ ವೃಂದ ಹಾಗೂ ಮೂಲ ವೃಂದಗಳ ವಿವರ ನೀಡುವುದು)

(ಇ) ೨೦೦೮ ರಿಂದ ಈವರೆವಿಗೂ ಎಷ್ಟು ಮುಖ್ಯ ಶಿಕ್ಷಕರುಗಳಿಗೆ ಸದರಿ ಕ್ಷೇತ್ರ ಶಿಕ್ಷಣಾಧಿಕಾರಿ/ತತ್ಸಮಾನ ವೃಂದದ ಹುದ್ದೆಗಳಲ್ಲಿ ಕ.ಸ.ಸೇ. ನಿಯಮಾವಳಿಗಳ ನಿಯಮ ೩೨ರಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದೆ; (ಪ್ರಭಾರದಲ್ಲಿರಿಸಿದ ದಿನಾಂಕದೊಂದಿಗೆ ಪಟ್ಟಿ ನೀಡುವುದು)

(ಈ) ಇವರುಗಳಲ್ಲಿ ಎಷ್ಟು ಅಧಿಕಾರಿಗಳಿಗೆ ಸ್ಥಾನಪನ್ನ ಮುಂಬಡ್ತಿಗೊಳಿಸಲಾಗಿದೆ; ಹಾಗೂ ಎಷ್ಟು ಅಧಿಕಾರಿಗಳಿಗೆ ಸ್ಥಾನಪನ್ನ ಬಡ್ತಿಗೊಳಿಸಬೇಕಿರುತ್ತದೆ; (ಹೆಸರುಗಳೊಂದಿಗೆ ವಿವರ ನೀಡುವುದು) ಒಂದೇ ಆದೇಶದಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿದ ಮುಖ್ಯ ಶಿಕ್ಷಕರುಗಳಿಗೆ ಒಟ್ಟಿಗೆ ಸ್ಥಾನಪನ್ನ ಮುಂಬಡ್ತಿ ನೀಡದೆ ವಿಳಂಬ ಮಾಡುತ್ತಿರಲು ಕಾರಣವೇನು; ಹಾಗೂ ಸದರಿ ಮುಖ್ಯ ಶಿಕ್ಷಕರುಗಳಿಗೆ ಯಾವಾಗ ಸ್ಥಾನಪನ್ನ ಮುಂಬಡ್ತಿ ನೀಡಲಾಗುವುದು; (ಸಂಪೂರ್ಣ ವಿವರ ನೀಡುವುದು)

(ಉ) ಸ್ಥಾನಪನ್ನ ಮುಂಬಡ್ತಿ ನೀಡಿದ ನಂತರವೂ ಎಷ್ಟು ಕ್ಷೇತ್ರ ಶಿಕ್ಷಣಾಧಿಕಾರಿ/ತತ್ಸಮಾನ ವೃಂದದ ಹುದ್ದೆಗಳು ಖಾಲಿ ಉಳಿಯುತ್ತವೆ; ಸದರಿ ಹುದ್ದೆಗಳನ್ನು ಮುಖ್ಯ ಶಿಕ್ಷಕರುಗಳ ವೃಂದದಿಂದ ಮುಂಬಡ್ತಿ ನೀಡುವುದರ ಮೂಲಕ ಭರ್ತಿ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು; ಯಾವಾಗ ಮುಂಬಡ್ತಿ ನೀಡಲಾಗುವುದು?

## TWF, SWF & VKN ಶುಲ್ಕ ವಸೂಲಾತಿ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೩೫೩ (೨೮೩೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭಾರತದ ಸಂವಿಧಾನದಂತೆ ರಚಿಸಿರುವ ಕಡ್ಡಾಯ ಶಿಕ್ಷಣ ಕಾಯ್ದೆಯನ್ವಯ ಎಷ್ಟು ವರ್ಷ ವಯಸ್ಸಿನ ವರೆಗೆ ಉಚಿತ ಶಿಕ್ಷಣ ನೀಡಬೇಕೆಂಬ ನಿಯಮವಿರುತ್ತದೆ ;

(ಆ) ಉಚಿತ ಶಿಕ್ಷಣ ನೀಡಬೇಕೆಂಬ ನಿಯಮವಿದ್ದರೂ ಸಹ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಂದ TWF, SWF ಮತ್ತು VKN ಶುಲ್ಕವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಅದಕ್ಕೆ ಕಾರಣವೇನು ;

(ಇ) S.S.A. ಮತ್ತು R.M.S.A ನಲ್ಲಿ ಬೇಕಾದಷ್ಟು ಹಣವಿದ್ದರೂ ಸರ್ಕಾರವು ಈ ರೀತಿ ಬಡಮಕ್ಕಳಿಂದ ಶುಲ್ಕ ವಸೂಲಿ ಮಾಡುತ್ತಿರುವುದು ಸಮಂಜಸವೇ ;

(ಈ) ೨೦೧೫–೧೬ನೇ ಸಾಲಿನ ಆಯವ್ಯಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರದೊಂದಿಗೆ ಷೂ ವನ್ನು ನೀಡಲಾಗುವುದೆಂದು ಘೋಷಿಸಿರುವುದು ನಿಜವೆ ; ನಿಜವಿದ್ದರೆ ಈವರೆವಿಗೂ ವಿದ್ಯಾರ್ಥಿಗಳಿಗೆ ಷೂ ವಿತರಿಸದೇ ಇರಲು ಕಾರಣವೇನು ; ಹಾಗೂ ಯಾವಾಗ ವಿತರಿಸಲಾಗುವುದು ?

## ಅನುದಾನಿತ ಹಾಗೂ ಅನುದಾನ ರಹಿತ ಶಾಲಾ ಕಾಲೇಜು ನೌಕರರಿಗೆ ವೈದ್ಯಕೀಯ ವಿಮಾ ಯೋಜನೆ ಜಾರಿಗೆ ತರುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :–**

೨೩೫೪ (೨೮೧೨) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳ ಅನುದಾನಿತ ಹಾಗೂ ಅನುದಾನರಹಿತ ಸಿಬ್ಬಂದಿ ವರ್ಗದವರಿಗೆ ಸರ್ಕಾರದಿಂದ ಯಾವುದೇ ವೈದ್ಯಕೀಯ ಸವಲತ್ತುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಸಿಬ್ಬಂದಿ ವರ್ಗದವರಿಗೆ ಸರ್ಕಾರದ ವತಿಯಿಂದ ಯಾವುದೇ ವೈದ್ಯಕೀಯ ಸೌಲಭ್ಯಗಳಿಲ್ಲದೆ ಇರುವುದರಿಂದ ಅನಾರೋಗ್ಯ ಪೀಡಿತರು ಹಾಗೂ ದೀರ್ಘಕಾಲದ ಖಾಯಿಲೆಯಿಂದ ನರಳುತ್ತಿರುವವರು ತುಂಬಾ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಾದರೆ ಸದರಿ ಸಿಬ್ಬಂದಿ ವರ್ಗದವರಿಗೆ ವೈದ್ಯಕೀಯ ವಿಮಾಯೋಜನೆಯನ್ನು ಜಾರಿಗೆ ತರಲು ಸರ್ಕಾರ ಆಲೋಚಿಸಿದೆಯೇ ; (ವಿವರ ನೀಡುವುದು)

(ಈ) ಯಾವ ಕಾಲಮಿತಿಯಲ್ಲಿ ವೈದ್ಯಕೀಯ ವಿಮಾ ಯೋಜನೆಯನ್ನು ತರಲಾಗುವುದು ?

## ಸರ್ಕಾರಿ ಪ್ರೌಢ ಶಾಲೆಗಳ ಉಪ ಪ್ರಾಂಶುಪಾಲರಿಗೆ ಪ್ರಭಾರ ಭತ್ಯೆ ನೀಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :–**

೨೩೫೫ (೨೮೧೩) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಸದರಿ ಕಾಲೇಜುಗಳ ಪ್ರೌಢಶಾಲಾ ವಿಭಾಗದಲ್ಲಿ ಮಂಜೂರಾಗಿರುವ ಉಪ ಪ್ರಾಂಶುಪಾಲರ ಹುದ್ದೆಗಳೆಷ್ಟು ; ಉಪ ಪ್ರಾಂಶುಪಾಲರ ಹುದ್ದೆ ಮಂಜೂರಾತಿಯಲ್ಲಿ ಅನುಸರಿಸುತ್ತಿರುವ ನಿಯಮಗಳೇನು ; (ವಿವರ ನೀಡುವುದು)

(ಇ) ಪ್ರೌಢಶಾಲಾ ವಿಭಾಗದಲ್ಲಿ ಉಪ ಪ್ರಾಂಶುಪಾಲರ ಹುದ್ದೆಗಳು ಮಂಜೂರಾತಿ ಇಲ್ಲದಿರುವ ಕಡೆ ಹಿರಿಯ ಶಿಕ್ಷಕರಿಗೆ ಉಪ ಪ್ರಾಂಶುಪಾಲರ ಕರ್ತವ್ಯಗಳನ್ನು ನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆಯೇ ;

(ಈ) ಸದರಿ ಹಿರಿಯ ಶಿಕ್ಷಕರಿಗೆ ಪ್ರಭಾರ ಭತ್ಯೆಗಳನ್ನು ನೀಡದೆ ಇರಲು ಕಾರಣಗಳೇನು ;

(ಉ) ಪ್ರತಿಯೊಂದು ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರೌಢಶಾಲಾ ವಿಭಾಗದಲ್ಲಿ ಉಪ ಪ್ರಾಂಶುಪಾಲರ ಹುದ್ದೆಗಳನ್ನು ಸೃಜಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ; ಹಾಗಾದರೆ ಯಾವ ಕಾಲಮಿತಿಯಲ್ಲಿ ಹುದ್ದೆಗಳನ್ನು ಸೃಜಿಸಲಾಗುವುದು ?

## ವೈದ್ಯಕೀಯ ವೆಚ್ಚ ಮರುಪಾವತಿಸುವಲ್ಲಿ ವಿಳಂಬ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :–**

೨೩೫೬ (೨೮೧೪) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಉತ್ತರ ಜಿಲ್ಲೆ, ದಕ್ಷಿಣ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಗಳಲ್ಲಿನ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಅರ್ಜಿ ಸಲ್ಲಿಸಿರುವ ಶಿಕ್ಷಕರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಈ ೪ ಜಿಲ್ಲೆಗಳ ಶಿಕ್ಷಕರಿಗೆ ಬೇಕಾಗಿರುವ ಮೊತ್ತವೆಷ್ಟು ; (ವಿವರ ನೀಡುವುದು)

(ಇ) ವೈದ್ಯಕೀಯ ವೆಚ್ಚ ಮರುಪಾವತಿಸುವಲ್ಲಿ ವಿಳಂಬ ಆಗಿರುವುದರಿಂದ ಸದರಿ ಶಿಕ್ಷಕರಿಗೆ ತುಂಬಾ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಾದರೆ, ವೈದ್ಯಕೀಯ ವೆಚ್ಚವನ್ನು ಯಾವ ಕಾಲಮಿತಿಯಲ್ಲಿ ಮರು ಪಾವತಿಸಲಾಗುವುದು ?

## ಅನುದಾನಿತ ಶಾಲಾ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :–**

೨೩೫೭ (೨೮೧೫) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಉತ್ತರ ಜಿಲ್ಲೆ, ದಕ್ಷಿಣ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಗಳಲ್ಲಿರುವ ಅನುದಾನಿತ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; (ಹೆಸರು, ವಿಳಾಸದೊಡನೆ ವಿವರ ನೀಡುವುದು)

(ಆ) ಸದರಿ ಶಾಲಾ ಕಾಲೇಜುಗಳಲ್ಲಿರುವ ಬೋಧಕ ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು; (ವಿಷಯವಾರು ಸಂಪೂರ್ಣ ವಿವರ ನೀಡುವುದು)

(ಇ) ಸದರಿ ಶಾಲಾ ಕಾಲೇಜುಗಳಲ್ಲಿ ನಿವೃತ್ತಿ, ಮರಣ ಇತ್ಯಾದಿ ಕಾರಣಗಳಿಂದ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಈ) ಸದರಿ ಹುದ್ದೆಗಳು ಖಾಲಿ ಇರುವುದರಿಂದ ಶಾಲೆಗಳಲ್ಲಿ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡುವುದೇ ; ಯಾವ ಕಾಲಮಿತಿಯಲ್ಲಿ ಅನುಮತಿ ನೀಡಲಾಗುವುದು ?

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಕ್ರಮ ಠೇವಣಿ ಮತ್ತು ಬ್ಯಾಂಕ್ ಖಾತೆಗಳ ನಿರ್ವಹಣೆ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೫೮ (೨೮೨೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ನೀರು ಸರಬರಾಜು ಯೋಜನೆಯಲ್ಲಿ ಅಕ್ರಮವಾಗಿ ತೆರೆಯಲಾದ ಬ್ಯಾಂಕ್ ಖಾತೆಗಳ ಸಂಖ್ಯೆ ಎಷ್ಟು; ಅದರಲ್ಲಿಟ್ಟಿರುವ ಅಕ್ರಮ ಠೇವಣಿ ಮೊತ್ತ ಎಷ್ಟು;

(ಆ) ಈ ಖಾತೆಗಳನ್ನು ತೆರೆದ ಅವಧಿ ಯಾವುದು ; ಖಾತೆಗಳನ್ನು ತೆಗೆದು ಠೇವಣಿಯಿಟ್ಟಿರುವ ಅಧಿಕಾರಿಗಳ ವಿವರ ನೀಡುವುದು ;

(ಇ) ಈ ಖಾತೆಗಳನ್ನು ತೆರೆದ ಅವಧಿಯಲ್ಲಿದ್ದ ಸಚಿವರು ಯಾರು ಯಾರು ;

(ಈ) ಈ ಅಕ್ರಮವೆಸಗಿದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು ?

## ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳ ಗೌರವಧನ ಪಾವತಿಯ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೫೯ (೨೮೨೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೧–೧೨ನೇ ಸಾಲಿನಿಂದ ೨೦೧೪–೧೫ನೇ ಸಾಲಿನವರೆಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳ ಗೌರವಧನ ಪಾವತಿಸಲಾಗಿದೆಯೇ ;

(ಆ) ಪಾವತಿಸದೇ ಇದ್ದಲ್ಲಿ ಪಾವತಿಸಬೇಕಾದ ಮೊತ್ತ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಗೌರವಧನ ಸದಸ್ಯರಿಗೆ ಪಾವತಿಸದಿರಲು ಕಾರಣಗಳೇನು ;

(ಈ) ಪಾವತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಹೊಸದಾಗಿ ಸೃಷ್ಟಿಸಲಾದ ಗ್ರಾಮ ಪಂಚಾಯತಿಗಳಿಗೆ ಅನುದಾನ ಒದಗಿಸುವ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೬೦ (೨೮೨೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಹೊಸದಾಗಿ ಸೃಷ್ಟಿಸಲಾದ ೪೩೯ ಗ್ರಾಮ ಪಂಚಾಯ್ತಿಗಳಿಗೆ ಮೂಲ ಸೌಲಭ್ಯಗಳಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹೊಸದಾಗಿ ಸೃಷ್ಟಿಸಲಾದ ೪೩೯ ಗ್ರಾಮ ಪಂಚಾಯ್ತಿಗಳ ಮೂಲ ಸೌಲಭ್ಯಗಳಿಗಾಗಿ ೨೦೧೫–೧೬ನೇ ಸಾಲಿನ ಬಜೆಟ್‌ನಲ್ಲಿ ಮೀಸಲಿಟ್ಟ ಅನುದಾನವೆಷ್ಟು ;

(ಇ) ಮೀಸಲಿಟ್ಟಿದ್ದರೆ ಈ ಅನುದಾನದಲ್ಲಿ ಗ್ರಾಮ ಪಂಚಾಯತಿಗಳಿಗೆ ಎಲ್ಲಾ ಮೂಲ ಸೌಲಭ್ಯ ಒದಗಿಸಲು ಸಾಧ್ಯವೇ ;

(ಈ) ಮೀಸಲಿಡದೇ ಇದ್ದಲ್ಲಿ ಇವುಗಳ ಮೂಲಸೌಲಭ್ಯಕ್ಕಾಗಿ ಸರ್ಕಾರ ಕೈಗೊಂಡ ಕ್ರಮವೇನು ?

## ಹೊಸದಾಗಿ ಸೃಷ್ಠಿಸಲಾದ ಗ್ರಾಮ ಪಂಚಾಯತಿಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೬೧ (೨೮೨೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೊಸದಾಗಿ ಸೃಷ್ಠಿಸಲಾದ ೪೫೯ ಗ್ರಾಮ ಪಂಚಾಯತಿಯ ಪೈಕಿ ಎಷ್ಟು ಗ್ರಾಮ ಪಂಚಾಯತಿಗಳಿಗೆ ಸ್ವಂತ ಕಟ್ಟಡವಿರುವುದಿಲ್ಲ ;

(ಆ) ಸ್ವಂತ ಕಟ್ಟಡವಿಲ್ಲದ ಗ್ರಾಮ ಪಂಚಾಯತಿಗಳಿಗೆ ಎಷ್ಟು ದಿನಗಳಲ್ಲಿ ಸರ್ಕಾರ ಸ್ವಂತ ಕಟ್ಟಡ ನಿರ್ಮಿಸಿ ಕೊಡುವುದು ;

(ಇ) ಹೊಸ ಗ್ರಾಮ ಪಂಚಾಯತಿಗಳಿಗೆ ಪೂರ್ಣ ಪ್ರಮಾಣದ ಸಿಬ್ಬಂದಿ ಲಭ್ಯವಿದೆಯೇ ;

(ಈ) ಇಲ್ಲದೇ ಇದ್ದಲ್ಲಿ ಯಾವಾಗ ನೇಮಕ ಮಾಡಲಾಗುವುದು ?

## ಸ್ವಚ್ಛ ಭಾರತ ಅಭಿಯಾನ ಯೋಜನೆಯಡಿಯಲ್ಲಿ ನಿರ್ಮಾಣವಾದ ಶೌಚಾಲಯಗಳಿಗೆ ಹಣ ಪಾವತಿಯ ಬಗ್ಗೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೬೨ (೨೮೨೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ಹಾಗೂ ೨೦೧೫–೧೬ನೇ ಸಾಲಿನಲ್ಲಿ ಸ್ವಚ್ಛ ಭಾರತ ಅಭಿಯಾನ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ನಿರ್ಮಾಣವಾದ ಶೌಚಾಯಲಗಳ ಸಂಖ್ಯೆ ಎಷ್ಟು ;

(ಆ) ೨೦೧೪-೧೫ ಹಾಗೂ ೨೦೧೫-೧೬ನೇ ಸಾಲಿನಲ್ಲಿ ನಿರ್ಮಾಣವಾದ ಎಷ್ಟು ಶೌಚಾಲಯುಗಳಿಗೆ ಪ್ರೋತ್ಸಾಹಧನ ಪಾವತಿಸಲಾಗಿದೆ ; ಪಾವತಿ ಮಾಡದೇ ಇರುವ ಶೌಚಾಲಯಗಳ ಸಂಖ್ಯೆ ಎಷ್ಟು ;

(ಇ) ಪಾವತಿಸದೇ ಇದ್ದರೆ ಯಾವಾಗ ಪಾವತಿಸಲಾಗುವುದು ? ಪಾವತಿಸಲು ಇರುವ ಸಮಸ್ಯೆಗಳೇನು ?

## ಬೆಂಗಳೂರಿನಲ್ಲಿರುವ ಸಣ್ಣ ಕೈಗಾರಿಕೆಗಳ ಕುರಿತು

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೬೩ (೨೯೬೩) ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು ; ಈ ಕೈಗಾರಿಕೆಗಳಿಂದ ರಾಜ್ಯದ ಪ್ರಗತಿಗೆ ದೊರೆಯುತ್ತಿರುವ ಆದಾಯ ಎಷ್ಟು ;

(ಆ) ಈ ಸಣ್ಣ ಕೈಗಾರಿಕೆಗಳಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ದೊರೆತಿದೆ ; ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸದ್ಯ ಇರುವ ಕಾನೂನು ಹಾಗೂ ಸರ್ಕಾರದಿಂದ ದೊರೆಯುತ್ತಿರುವ ಸವಲತ್ತುಗಳಾವುವು ;

(ಇ) ಸಣ್ಣ ಕೈಗಾರಿಕೆಗಳ ವ್ಯಾಪ್ತಿಗೆ ಬರುವ ಕೈಗಾರಿಕೆಗಳಾವುವು ;

(ಈ) ರಾಜ್ಯದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ ; ಇಲ್ಲದಿದ್ದ ಪಕ್ಷದಲ್ಲಿ ಸ್ವಂತ ಕಟ್ಟಡವನ್ನು ಹೊಂದಲು ಸರ್ಕಾರದ ಕ್ರಮವೇನು ?

## ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಹಣಕಾಸು ನೆರವು ಪಡೆದಿರುವ ಕೈಗಾರಿಕೆಗಳ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೬೪ (೨೯೬೨) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೆ.ಐ.ಎ.ಡಿ.ಬಿ ಯಿಂದ ನಿವೇಶನವನ್ನು ಮಂಜೂರಾತಿ ಪಡೆದು ಕರ್ನಾಟಕ ಹಣಕಾಸು ನಿಗಮದಿಂದ ಹಣಕಾಸು ನೆರವು ಪಡೆದು ಸರಿಯಾದ ಸಮಯಕ್ಕೆ ಹಣವನ್ನು ಪಾವತಿಸದೇ ಇರುವ ಕೈಗಾರಿಕೆ ಸಂಸ್ಥೆಗಳ ಸಂಖ್ಯೆ ಎಷ್ಟು ;

(ಆ) ಸದರಿ ಸಂಸ್ಥೆಗಳಿಂದ ಬಾಕಿ ಇರುವ ಹಣದ ಬಾಬ್ತನ್ನು ವಾಪಸ್ಸು ಪಡೆಯುಲು ಸರ್ಕಾರವು ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳೇನು ;

(ಇ) ಈ ಬಾಕಿದಾರರ ಪೈಕಿ ಕಾಣೆಯಾದವರ ಬಗ್ಗೆ ಸರ್ಕಾರವು ಯಾವ ರೀತಿಯ ವಿಶೇಷ ಕ್ರಮವನ್ನು ಕೈಗೊಂಡಿದೆ ?

## ಮುಂದಿನ ಕೈಗಾರಿಕಾ ಜಾಗತಿಕ ಹೂಡಿಕೆದಾರರ ಸಮಾವೇಶದ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೬೫ (೨೯೬೧) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮುಂದಿನ ಕೈಗಾರಿಕಾ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಇಲ್ಲಿಯುವರೆಗೆ ಎಷ್ಟು ಸಂಸ್ಥೆಗಳು ಭಾಗವಹಿಸಬಹುದೆಂದು ಅಂದಾಜಿಸಲಾಗಿದೆ ;

(ಆ) ಕಳೆದ ೦೩ ವರ್ಷಗಳಿಂದ ಎಷ್ಟು ಸಂಸ್ಥೆಗಳ ಜೊತೆ MOU (Memorandum of understanding) ಗೆ ಸರ್ಕಾರವು ಸಹಿ ಮಾಡಿದೆ ; ಎಷ್ಟು ಬಂಡವಾಳವನ್ನು ತೊಡಗಿಸಲು ಉದ್ದೇಶಿಸಲಾಗಿತ್ತು ; ಮತ್ತೆ ಎಷ್ಟು ಜನರಿಗೆ ನೌಕರಿಯನ್ನು ಒದಗಿಸಲು ಉದ್ದೇಶಿಸಲಾಗಿತ್ತು ; (ವರ್ಷವಾರು/ಸಂಸ್ಥೆವಾರು ವಿವರ ಒದಗಿಸುವುದು)

(ಇ) MOU (Memorandum of understanding) ನ ಪ್ರಕಾರ ಎಷ್ಟು ಸಂಸ್ಥೆಗಳು ಪ್ರಸ್ತುತ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ ; ಬಂಡವಾಳ ಮತ್ತು ನೌಕರರ ಸಂಖ್ಯೆ ಎಷ್ಟು ?

## ಬೆಂಗಳೂರಿನಲ್ಲಿರುವ ಸಣ್ಣ ಕೈಗಾರಿಕೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಬಗ್ಗೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೬೬ (೨೮೨೮) ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನಲ್ಲಿ ಗುರುತಿಸಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು ;

(ಇ) ಕೈಗಾರಿಕೆಗಳಲ್ಲಿನ ಕಾರ್ಮಿಕರುಗಳಿಗೆ ಸರ್ಕಾರದಿಂದ ಮತ್ತು ಕೈಗಾರಿಕೆ ಮಾಲೀಕರುಗಳಿಂದ ಅಪಘಾತ ಪರಿಹಾರ, ಆರೋಗ್ಯ ಸೌಲಭ್ಯಗಳು ಒದಗಿಸಲಾಗುತ್ತಿದೆಯೇ ;

(ಈ) ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರುಗಳಿಗೆ ಇ.ಎಸ್.ಐ. ಮತ್ತು ಪಿ.ಎಫ್‌ನ ಪ್ರತಿ ತಿಂಗಳ ವಂತಿಕೆ ಹಣವನ್ನು ಕಟಾಯಿಸಲಾಗುತ್ತಿದೆಯೇ ;

(ಉ) ಕೆಲವು ಕಾರ್ಖಾನೆಗಳಲ್ಲಿ ಈ ವಿಮೆಗಳ ಸೌಲಭ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಸೌಲಭ್ಯ ಒದಗಿಸದೇ ಇರುವ ಕಾರ್ಖಾನೆಗಳ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ? (ವಿವರ ನೀಡುವುದು)

## ಕುಡಿಯುವ ನೀರಿನ ಪೂರೈಕೆ

**ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶನ ಹೊಂದಿದವರು):-**

೨೩೬೭ (೨೮೨೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬರಪೀಡಿತ ತಾಲ್ಲೂಕುಗಳಿಗೆ ಕುಡಿಯುವ ನೀರು ಪೂರೈಸಲು ಸರ್ಕಾರ ವೆಚ್ಚ ಮಾಡಿದ ಹಣವೆಷ್ಟು ;

(ಆ) ಬಾಗಲಕೋಟೆ, ಬಳ್ಳಾರಿ, ಕೊಪ್ಪಳ, ರಾಯಚೂರು ಮುಂತಾದ ಭಾಗಗಳಲ್ಲಿ ನೀರಿನ ಸಮಸ್ಯೆ ತೀವ್ರವಾಗಿದ್ದು, ಇವುಗಳಿಗೆ ಸರ್ಕಾರ ನೀಡಿದ ಅನುದಾನದ ಮೊತ್ತವೆಷ್ಟು ; ಇದರ ಸದ್ಬಳಕೆಯಾಗಿದೆಯೇ ;

(ಇ) ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಮುಂದಿನ ಬೇಸಿಗೆಯಲ್ಲಿ ಗ್ರಾಮೀಣ ಜನತೆ ಇನ್ನು ಕೆಟ್ಟ ಪರಿಸ್ಥಿತಿ ಎದುರಿಸಲಿರುವುದರಿಂದ ಇದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಎಂ.ಎಸ್.ಐ.ಎಲ್‌ನ ಗುತ್ತಿಗೆ ನೌಕರರ ಬಗ್ಗೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):–**

೨೩೬೮ (೨೮೪೦) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾರ್ವಜನಿಕ ಉದ್ದಿಮೆಗಳಲ್ಲಿ ಒಂದಾದ ಎಂ.ಎಸ್.ಐ.ಎಲ್.ನಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಹೊಂದಿರುವ ನೌಕರರ ಸಂಖ್ಯೆ ಎಷ್ಟು ; ಆ ಪೈಕಿ ಹಾಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ;

(ಆ) ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಎಷ್ಟು ನೌಕರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ; ಸದರಿ ನೌಕರರನ್ನು ಏಕಾಏಕಿ ವರ್ಗಾವಣೆ ಮಾಡುವುದು ಮತ್ತು ಕೆಲಸದಿಂದ ವಜಾ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು ;

(ಇ) ಸದರಿ ನೌಕರರು ಪ್ರತಿದಿನ ಕರ್ತವ್ಯ ನಿರ್ವಹಿಸಬೇಕಾದ ಅವಧಿ ಎಷ್ಟು ; ಅವರುಗಳಿಗೆ ಪಾವತಿಸಲಾಗುತ್ತಿರುವ ವೇತನ ಎಷ್ಟು ; ಯಾವ ದಿನಾಂಕದಂದು ಪಾವತಿಸಲಾಗುತ್ತಿದೆ ;

(ಈ) ಡಿಸ್ಟ್ರಿಕ್ಟ್ ಇನ್–ಚಾರ್ಜ್ ಮತ್ತು ರೀಟೆಲ್ ಇನ್–ಚಾರ್ಜ್ ಅಧಿಕಾರಿಗಳು ಸದರಿ ನೌಕರರಿಂದ ಲಂಚ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ; ಸದರಿ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು ? (ಎಲ್ಲೆಲ್ಲಿ ಮತ್ತು ಯಾವಾಗ ಎಂಬ ಮಾಹಿತಿಯೊಂದಿಗೆ ವಿವರ ನೀಡುವುದು)

## ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ರೋಸ್ಟರ್ ನಿಯಮ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೬೯ (೨೯೧೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ರೋಸ್ಟರ್ ವಿನಾಯಿತಿ (ನೇಮಕಾತಿ) ಕುರಿತು ಇರುವ ನಿಯಮಾವಳಿಗಳೇನು ; (ಅವುಗಳ ಪಾಲನೆ ಆಗುತ್ತಿದೆಯೇ)

(ಆ) ಧಾರವಾಡ ಆಯುಕ್ತಾಲಯದಲ್ಲಿ ಕಳೆದ ೦೨ ವರ್ಷಗಳಲ್ಲಿ ರೋಸ್ಟರ್ ವಿನಾಯಿತಿ ನೀಡಿ ನೇಮಕಾತಿಗೆ ಅವಕಾಶ ಮಾಡಿಕೊಟ್ಟಿರುವ ಪ್ರತಿ ಪ್ರಸ್ತಾವನೆಯ ವಿವರ ನೀಡುವುದು ; (ಮತೀಯ ಅಲ್ಪಸಂಖ್ಯಾತ ಹಾಗೂ ಭಾಷಿಕ ಅಲ್ಪಸಂಖ್ಯಾತ ಇವೆರಡರ ಮಾಹಿತಿ ನೀಡುವುದು)

(ಇ) ಈಗ ಧಾರವಾಡ ಆಯುಕ್ತಾಲಯುದಲ್ಲಿ ಮತೀಯು ಅಲ್ಪ ಸಂಖ್ಯಾತರಿಗೊಂದು, ಭಾಷಿಕ ಅಲ್ಪ ಸಂಖ್ಯಾತರಿಗೊಂದು ನಿಲುವು ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು ? (ವಿವರ ನೀಡುವುದು)

## ಕೈಗಾರಿಕೆ ಟೌನ್‌ಷಿಪ್‌ಗಳ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೭೦ (೨೮೩೯) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೈಗಾರಿಕೆ ಟೌನ್‌ಷಿಪ್‌ಗಳ ಸ್ಥಾಪನೆ ಕುರಿತು ಕೈಗೊಂಡ ಕ್ರಮಗಳೇನು ;

(ಆ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಯಾವ ಯಾವ ನಗರಗಳಲ್ಲಿ ಕೈಗಾರಿಕಾ ಟೌನ್‌ಷಿಪ್‌ಗಳನ್ನು ಸ್ಥಾಪಿಸಲಾಗಿದೆ ; ಸ್ಥಾಪಿಸಲಾದ ಕೈಗಾರಿಕಾ ಟೌನ್‌ಷಿಪ್‌ಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ; (ಸಂಪೂರ್ಣ ವಿವರ ನೀಡುವುದು)

(ಇ) ಕೈಗಾರಿಕಾ ಟೌನ್‌ಷಿಪ್‌ಗಳನ್ನು ಸ್ಥಾಪಿಸಲು ಇರುವ ಮಾನದಂಡಗಳೇನು ; ಇದಕ್ಕಾಗಿ ತಗಲುವ ವೆಚ್ಚವೆಷ್ಟು ? (ಸಂಪೂರ್ಣ ವಿವರ ನೀಡುವುದು)

## ಗ್ರಾಮ ಪಂಚಾಯತ್ ನೌಕರರ ಖಾಯಂಮಾತಿ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೭೧ (೨೯೭೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಗ್ರಾಮ ಪಂಚಾಯತ್‌ಗಳಲ್ಲಿ ನಿಯಮ ಮೀರಿ ನೇಮಕ ಮಾಡಿಕೊಂಡು, ಪಂಚಾಯತ್‌ಗಳಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಒಟ್ಟು ಎಷ್ಟು ಮಂದಿ ನೌಕರರನ್ನು ಸರ್ಕಾರದ ಈ ಹಿಂದಿನ ಆದೇಶದಂತೆ ಖಾಯಂಗೊಳಿಸಿ ಜಿಲ್ಲಾ ಪಂಚಾಯತ್ ಅನುಮೋದನೆ ನೀಡಲಾಗಿದೆ ; ಎಷ್ಟು ನೌಕರರ ನೇಮಕಾತಿಗೆ ಅನುಮೋದನೆಯನ್ನು ನೀಡಿಲ್ಲ ; ಅನುಮೋದನೆ ನೀಡದಿರುವುದಕ್ಕೆ ಕಾರಣವೇನು ; (ಜಿಲ್ಲಾವಾರು/ತಾಲ್ಲೂಕುವಾರು, ಹುದ್ದೆವಾರು ಸಂಪೂರ್ಣ ಮಾಹಿತಿ ನೀಡುವುದು)

(ಅ) ಯಾವ ಯಾವ ಜಿಲ್ಲೆಗಳಲ್ಲಿ ತಾತ್ಕಾಲಿಕ ಗ್ರಾಮ ಪಂಚಾಯತ್ ನೌಕರರನ್ನು ಜಿಲ್ಲಾ ಪಂಚಾಯತ್ ಅನುಮೋದನೆ ನೀಡಿ

ಖಾಯಂಗೊಳಿಸುವ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ ; ಇನ್ನೂ ಈ ಬಗ್ಗೆ ಯಾವ ಯಾವ ಜಿಲ್ಲೆಗಳಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಿಲ್ಲ ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ;

(ಇ) ಈಗಾಗಲೇ ಕ್ಲರ್ಕ್ ಹುದ್ದೆ ಇರುವ ಪಂಚಾಯತುಗಳಲ್ಲಿನ ಕಂಪ್ಯೂಟರ್ ಆಪರೇಟರ್‌ಗಳಿಗೆ ಅನುಮೋದನೆ ನೀಡದೆ ಸಾವಿರಾರು ನೌಕರರು ಅತಂತ್ರರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ;

(ಈ) ೨೦೧೪ಕ್ಕೂ ಮುಂಚೆ ಗ್ರಾಮ ಪಂಚಾಯತುಗಳಲ್ಲಿ ಪೂರ್ವಾನುಮೋದನೆ ಇಲ್ಲದೆ ನೇಮಕಾತಿ ಹೊಂದಿ ಕರ್ತವ್ಯ ನಿರ್ವಹಿಸುತ್ತಿದ್ದ ಕಂಪ್ಯೂಟರ್ ಆಪರೇಟರ್‌ಗಳೂ ಸೇರಿ ಎಲ್ಲಾ ಪಂಚಾಯತ್ ನೌಕರರ ಖಾಯಂಮಾತಿಗೆ ಅನುಮೋದನೆ ನೀಡುವ ಸಂದರ್ಭದಲ್ಲಿ, ವಿದ್ಯಾರ್ಹತೆ, ವಯೋಮಿತಿ, ರೋಸ್ಟರ್ ಸಡಿಲಿಕೆ ಮಾಡಿ ಗ್ರಾಮೀಣಾಭಿವೃದ್ಧಿಗಾಗಿ ದುಡಿಯುವ ಪಂಚಾಯತ್ ನೌಕರರ ಹಿತ ಕಾಪಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ಸಂಪೂರ್ಣ ವಿವರ ನೀಡುವುದು)

## ಪ್ರವಾಸೋದ್ಯಮ ಯೋಜನೆಗಳ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೭೨ (೨೯೭೩) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಅನುಷ್ಠಾನಗೊಂಡ ಜಿಲ್ಲಾವಾರು ಯೋಜನೆಗಳು/ಕಾರ್ಯಕ್ರಮಗಳು ಯಾವುವು ; (ಸಂಪೂರ್ಣ ವಿವರ ನೀಡುವುದು)

(ಆ) ಕಳೆದ ೨ ವರ್ಷಗಳಲ್ಲಿ ಪ್ರವಾಸೋದ್ಯಮ ಇಲಾಖೆಯ ಯೋಜನೆಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ; (ವರ್ಷವಾರು, ಜಿಲ್ಲಾವಾರು ವಿವರ ನೀಡುವುದು)

(ಇ) ಬೆಳಗಾವಿ ಜಿಲ್ಲೆಯ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಈ ಬಗ್ಗೆ ಸಂಪೂರ್ಣ ವಿವರ ನೀಡುವುದು ;

(ಈ) ಜಿಲ್ಲೆಗಳಲ್ಲಿ ಒಟ್ಟಾರೆ ಪ್ರವಾಸೋದ್ಯಮ ಅಭಿವೃದ್ಧಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹೌದಾದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ ;

(ಉ) ಬೆಳಗಾವಿ ಸೇರಿದಂತೆ ಉತ್ತರ ಕರ್ನಾಟಕದ ಜಿಲ್ಲೆಗಳ ಪ್ರವಾಸೋದ್ಯಮವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ವಸತಿ ನಿಗಮದಿಂದ ಮಂಜೂರಾದ ಮನೆಗಳ ವಿವರ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೭೩ (೨೯೭೧) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಾದ್ಯಂತ ಕಳೆದ ೩ ವರ್ಷಗಳಲ್ಲಿ ವಸತಿ ನಿಗಮದಿಂದ ವಸತಿ ರಹಿತರಿಗೆ ವಿತರಿಸಿದ ಮನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿಯೊಂದಿಗೆ ಬೆಳಗಾವಿ ಜಿಲ್ಲೆಯ ಗ್ರಾಮ ಪಂಚಾಯತ್‌ವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ವಸತಿ ನಿಗಮದಿಂದ ವಸತಿ ರಹಿತ ಬಡವರಿಗೆ ವಿತರಿಸಿರುವ ನಿವೇಶನದಲ್ಲಿ, ನಿಗಮದಿಂದ ಎಷ್ಟು ಮನೆಗಳನ್ನು ಮಂಜೂರು

ಮಾಡಲಾಗಿದೆ ; (ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಕೇವಲ ನಿವೇಶನ ಮಂಜೂರಾಗಿ ಸರ್ಕಾರದ ಮನೆಗಾಗಿ ಕಾಯುತ್ತಿರುವ ಬಡವರ ನಿವೇಶನವು ಖಾಲಿ ಬಿದ್ದಿರುವುದು ಹಾಗೂ ಇತರ ಪ್ರಭಾವಿಗಳಿಂದ ಒತುವರಿ ಆಗುತ್ತಿರುವುದು ನಿವೇಶನಗಳ ಅನಧಿಕೃತ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಉಪ್ಪುನೀರು ಮರಳುಗಾರಿಕೆಯಿಂದಾಗುತ್ತಿರುವ ಹಾನಿಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೭೪ (೨೮೪೧) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಪ್ಪುನೀರು ಮರಳು ಗಣಿಗಾರಿಕೆಯಿಂದ ಮತ್ತು ಉಪ್ಪುನೀರು ಮರಳು ಬಳಕೆಯಿಂದ ಕಟ್ಟಡಗಳ ಹಾಗೂ ನಿರ್ಮಾಣ ಕಾಮಗಾರಿಗಳ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕಿದೆಯೇ ; ಇದ್ದಲ್ಲಿ, ಉಪ್ಪುನೀರು ಗಣಿಗಾರಿಕೆಗೆ ಪರವಾನಿಗೆ ನೀಡುವುದರ ಔಚಿತ್ಯವೇನು ;

(ಆ) ಮರಳು ದಿಬ್ಬಗಳ ತೆರವಿನ ಹೆಸರಿನಲ್ಲಿ ಅಕ್ರಮವಾಗಿ ನಡೆಯುತ್ತಿರುವ ಉಪ್ಪುನೀರು ಮರಳು ಗಣಿಗಾರಿಕೆಯಿಂದ ಮರಳಿನಲ್ಲಿ ವಾಸಿಸುವ ಜಲಜೀವಿಗಳಿಗೆ ಹಾನಿಯಾಗುತ್ತಿರುವುದು ಇಲಾಖೆ ಗಮನಿಸಿದೆಯೇ ; ಗಮನಿಸಿದಲ್ಲಿ, ಸರ್ಕಾರದ ನಿಲುವೇನು ;

(ಇ) ಉಪ್ಪುನೀರು ಮರಳು ಗಣಿಗಾರಿಕೆಯಿಂದ ಸಮುದ್ರದ ನೀರು ನದಿಯ ಕಡೆಗೆ ರಭಸವಾಗಿ ಹರಿಯುವುದೆಂಬ ಅರಿವು ಇಲಾಖೆಗಿದೆಯೇ ; ಇದ್ದಲ್ಲಿ, ಸರ್ಕಾರದ ಸಮಜಾಯಿಷಿ ಏನು ;

(ಈ) ರಾಷ್ಟ್ರೀಯ ಹಸಿರು ಪೀಠದ ಆದೇಶದ ಉಲ್ಲಂಘನೆ ಉಪ್ಪುನೀರು ಮರಳು ಗಣಿಗಾರಿಕೆಯಲ್ಲಿ ಆಗುತ್ತಿರುವುದು ಸರ್ಕಾರದ ಗಮನಕ್ಕಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೭೫ (೨೮೪೨) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗುರುತಿಸಲಾದ ಪ್ರವಾಸಿ ತಾಣಗಳು ಎಷ್ಟು ಮತ್ತು ಯಾವುವು ; (ಜಿಲ್ಲಾವಾರು, ತಾಲ್ಲೂಕುವಾರು, ವಿಳಾಸದೊಂದಿಗೆ ವಿವರ ನೀಡುವುದು)

(ಆ) ಮೂರು ವರ್ಷಗಳಲ್ಲಿ ಅವುಗಳ ಅಭಿವೃದ್ಧಿಗಾಗಿ ಇಲಾಖೆ ಮಾಡಿದ ವೆಚ್ಚವೆಷ್ಟು ಮತ್ತು ಅವುಗಳಿಂದ ಬಂದ ಆದಾಯವೆಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು, ಪ್ರವಾಸಿ ತಾಣವಾರು ವಿವರ ನೀಡುವುದು)

(ಇ) ಗೋವಾ ಮತ್ತು ಕೇರಳ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಪ್ರವಾಸಿ ತಾಣಗಳು ನಿರ್ಲಕ್ಷಿಸಲ್ಪಟ್ಟಿವೆ ಎಂಬುದು ಸರ್ಕಾರದ ಗಮನದಲ್ಲಿದೆಯೇ ; ಇದ್ದಲ್ಲಿ, ಗೋವಾ ಮತ್ತು ಕೇರಳ ರಾಜ್ಯಗಳ

ಪ್ರವಾಸಿ ತಾಣಗಳೊಂದಿಗೆ ಸ್ಪರ್ಧಾತ್ಮಕವಾಗಿ ಕಾರ್ಯಕ್ರಮ ರೂಪಿಸಲಾಗಿದೆಯೇ ? (ಕಾರ್ಯಕ್ರಮಗಳ ವಿವರ ನೀಡುವುದು)

## ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಕಲ್ಲು ಹಾಗೂ ಮರಳು ಗಣಿಗಾರಿಕೆಗೆ ಪಂಚಾಯತ್ ಎನ್‌ಒಸಿ ಅಗತ್ಯವಿಲ್ಲದಿರುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೭೬ (೨೮೪೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮ ಪಂಚಾಯತುಗಳ ವ್ಯಾಪ್ತಿಯಲ್ಲಿ ನಡೆಯುವಂತಹ ಎಲ್ಲಾ ಸರ್ಕಾರಿ ಖಾಸಗಿ ಯಾವುದೇ ವ್ಯವಹಾರಿಕ ಉದ್ಯಮವನ್ನು ಪ್ರಾರಂಭಿಸುವಾಗ ಗ್ರಾಮ ಪಂಚಾಯತುಗಳ ನಿರಪೇಕ್ಷಣಾ ಪತ್ರವನ್ನು ಪಡೆಯಲಾಗುತ್ತಿದ್ದು, ಕಲ್ಲು ಮತ್ತು ಮರಳು ಗಣಿಗಾರಿಕೆಯಲ್ಲಿ ಗ್ರಾಮ ಪಂಚಾಯತುಗಳ ನಿರಪೇಕ್ಷಣ ಪತ್ರವನ್ನು ಪಡೆಯದೇ ಇರಲು ಕಾರಣವೇನು ಮತ್ತು ಇದಕ್ಕೆ ಇಲಾಖೆಯ ಸಮಜಾಯಿಷಿ ಏನು ;

(ಆ) ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿ ಸರ್ಕಾರದ ಸ್ವತ್ತನ್ನು ಲೂಟಿ ಮಾಡುತ್ತಿರುವ ಕಲ್ಲು ಮತ್ತು ಮರಳು ಗಣಿಗಾರಿಕೆಯಲ್ಲಿ ಇಲಾಖಾ ನಿರ್ಲಕ್ಷ್ಯತೆಗೆ ಕಾರಣವೇನು ;

(ಇ) ರಾಜ್ಯದಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಲ್ಲು ಮತ್ತು ಮರಳು ಗಣಿಗಾರಿಕೆಯಿಂದ ರಸ್ತೆ ಮತ್ತು ಜನಜೀವನಕ್ಕೆ ತೊಂದರೆಯಾದಾಗ ಪಂಚಾಯತ್‌ರಾಜ್ ಅಧಿನಿಯಮದ ಯಾವ ನಿಯಮದ ಅಡಿಯಲ್ಲಿ ಪರವಾನಗೆಗಳನ್ನು ರದ್ದು ಮಾಡಲು ಸಾಧ್ಯ ; ಇಲ್ಲವಾದಲ್ಲಿ, ಕಾಯ್ದೆಗೆ ತಿದ್ದುಪಡಿ ತರಲಾಗುವುದೇ ?

## ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಶಾಸನಬದ್ಧ ಅನುದಾನವನ್ನು ವಿದ್ಯುತ್ ಬಿಲ್ ಪಾವತಿಸಲು ಖಾತೆ ತೆರೆದು ಜಮಾ ಮಾಡುತ್ತಿರುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೭೭ (೨೮೪೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಗ್ರಾಮ ಪಂಚಾಯತುಗಳ ಶಾಸನಬದ್ಧ ಅನುದಾನವನ್ನು ವಿದ್ಯುತ್ ಬಿಲ್ ಪಾವತಿಗಾಗಿ ಒಂದು ಖಾತೆ ತೆರೆದು ಅದಕ್ಕೆ ಜಮಾ ಮಾಡುತ್ತಿರುವುದು ನಿಜವೇ ; ಜಮಾ ಮಾಡುತ್ತಿದ್ದಲ್ಲಿ, ಅದರ ಉದ್ದೇಶವೇನು ;

(ಆ) ಈ ನೀತಿಯಿಂದ ನಿಗದಿತ ಸಮಯಕ್ಕೆ ವಿದ್ಯುತ್ ಬಿಲ್ ಪಾವತಿಸುತ್ತಿರುವ ಹಾಗೂ ಯಾವುದೇ ವಿದ್ಯುತ್ ಬಿಲ್ ಪಾವತಿಯ ಬಾಕಿಯನ್ನು ಇಟ್ಟುಕೊಂಡಿರುವ ಗ್ರಾಮ ಪಂಚಾಯತುಗಳಿಗೆ ತೊಂದರೆಯಾಗುತ್ತಿರುವುದಿಲ್ಲವೇ ; ಇದನ್ನು ಸರಿಪಡಿಸಲು ಇಲಾಖೆ ತೆಗೆದುಕೊಂಡ ಕ್ರಮಗಳೇನು ?

## ರಾಜ್ಯದಲ್ಲಿರುವ ಸೇವಾ ಖಾಯಂಯಾತಿ ಆಗದ ಗ್ರಾಮ ಪಂಚಾಯತಿ ಸಿಬ್ಬಂದಿಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೩೭೮ (೨೮೪೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಸೇವಾ ಖಾಯಂಯಾತಿ ಆದ ಗ್ರಾಮ ಪಂಚಾಯತ್ ಸಿಬ್ಬಂದಿಗಳ ಸಂಖ್ಯೆ ಎಷ್ಟು ಮತ್ತು ಅವರಲ್ಲಿ ಪುರುಷ ಸಿಬ್ಬಂದಿಗಳ

ಸಂಖ್ಯೆ ಎಷ್ಟು ಮತ್ತು ಮಹಿಳಾ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಸೇವಾ ಖಾಯಂಯಾತಿ ಆದ ಗ್ರಾಮ ಪಂಚಾಯತ್ ಸಿಬ್ಬಂದಿಗಳಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಲ್ಲಿ ಸೇವಾ ಖಾಯಂಯಾತಿ ಆಗದ ಸಿಬ್ಬಂದಿಗಳ ಸಂಖ್ಯೆ ಎಷ್ಟು ಮತ್ತು ಇವರ ಸೇವಾ ಖಾಯಂಯಾತಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ತಾಲ್ಲೂಕುವಾರು ವಿವರ ನೀಡುವುದು)

(ಈ) ರಾಜ್ಯದ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾ ಖಾಯಂಯಾತಿ ಆಗದ ಮಹಿಳಾ ಸಿಬ್ಬಂದಿಗಳ ಮೇಲೆ ಸೇವಾ ಖಾಯಂಯಾತಿ ಹೆಸರಿನಲ್ಲಿ ದೌರ್ಜನ್ಯ ನಡೆಯುತ್ತಿರುವುದು ಸರ್ಕಾರದ ಗಮನಕ್ಕಿದೆಯೇ ; ಇದ್ದಲ್ಲಿ, ಸರ್ಕಾರ ತೆಗೆದುಕೊಳ್ಳುವ ತುರ್ತು ಕ್ರಮಗಳೇನು ; ಇಲ್ಲವಾದಲ್ಲಿ, ಕಾರಣವೇನು ?

## ಕೊಪ್ಪಳ ಜಿಲ್ಲೆಯಲ್ಲಿ ೨೦೧೩–೧೪ ರಿಂದ ಪ್ರಸಕ್ತ ವರ್ಷದವರೆಗೆ ಮಂಜೂರಾದ ಮನೆಗಳ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೩೭೯(೨೮೮೭) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಪ್ಪಳ ಜಿಲ್ಲೆಯಲ್ಲಿ ೨೦೧೩–೧೪ ರಿಂದ ಪ್ರಸಕ್ತ ಸಾಲಿನವರೆಗೆ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು ; ತಾಲ್ಲೂಕುವಾರು ಮಾಹಿತಿ ನೀಡುವುದು ; (ಯೋಜನೆಗಳವಾರು ವಿವರ ನೀಡುವುದು)

(ಆ) ಸದರಿ ಮಂಜೂರಾದ ಮನೆಗಳ ಪೈಕಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ ;

(ಇ) ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗದೇ ರದ್ದುಗೊಳಿಸಲಾಗಿದೆ ; ರದ್ದುಗೊಳಿಸಲು ಕಾರಣವೇನು ;

(ಈ) ಮಂಜೂರಾದ ಮನೆಗಳಲ್ಲಿ ಎಷ್ಟು ಮನೆಗಳು ಪೂರ್ಣಗೊಂಡಿವೆ ಎಂಬ ವಿವರ ನೀಡುವುದು ; ಮತ್ತು ಪೂರ್ಣಗೊಳ್ಳದ ಮನೆಗಳ ಸಂಖ್ಯೆ ಎಷ್ಟು ; ಪೂರ್ಣಗೊಳ್ಳದೆ ಇರುವುದಕ್ಕೆ ಕಾರಣಗಳೇನು ;

(ಉ) ಈ ಸಾಲಿನಲ್ಲಿ ಯಾವ ಯಾವ ಯೋಜನೆಯಲ್ಲಿ ಎಷ್ಟು ಮನೆಗಳು ಹಂಚಿಕೆಯಾಗಿರುತ್ತವೆ ; ಮತ್ತು ಒಂದು ಮನೆಗೆ ಸರ್ಕಾರವು ನೀಡುತ್ತಿರುವ ಮೊತ್ತವೆಷ್ಟು ;

(ಊ) ಮನೆಗಳನ್ನು ಹಂಚಿಕೆ ಮಾಡುವಲ್ಲಿ ಅನುಸರಿಸುವ ವಿಧಾನವೇನು ? ಇದಕ್ಕಿರುವ ಮಾನದಂಡಗಳೇನು ?

## ಕೊಪ್ಪಳ ಜಿಲ್ಲೆಯಲ್ಲಿ ಕೈಗಾರಿಕಾ ವಲಯದಿಂದ ಉದ್ಯೋಗ ಕಲ್ಪಿಸುವ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೩೮೦(೨೮೯೧) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಪ್ಪಳ ಜಿಲ್ಲೆಯಲ್ಲಿ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬಹುದಾದಂತಹ ಮಹತ್ವದ ಯೋಜನೆಯಾದ ಸಣ್ಣ ಕೈಗಾರಿಕಾ ವಸಾಹತು ಯೋಜನೆಗೆ ಕೊಪ್ಪಳ ಜಿಲ್ಲೆಯಲ್ಲಿ ಚಾಲನೆ ನೀಡಲಾಗಿದೆಯೇ ;

(ಆ) ನೀಡಲಾಗಿದ್ದಲ್ಲಿ, ಯಾವ ಭಾಗದಲ್ಲಿ ಎಷ್ಟು ಎಕರೆ ಭೂ ಪ್ರದೇಶವನ್ನು ಕಾಯ್ದಿರಿಸಲಾಗಿದೆ ;

(ಇ) ನಿವೇಶನಕ್ಕಾಗಿ ಆಸಕ್ತರಿಂದ ಅರ್ಜಿ ಸಲ್ಲಿಕೆಯಾಗಿವೆಯೇ ; ಹಾಗಿದ್ದಲ್ಲಿ, ಎಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ ; ಯಾವ ದಿನಾಂಕಕ್ಕೆ ಅರ್ಜಿ ಸಲ್ಲಿಸಿರುತ್ತಾರೆ ಎಂಬ ವಿವರಗಳನ್ನು ನೀಡುವುದು ;

(ಈ) ಅರ್ಜಿಗಳನ್ನು ಆಹ್ವಾನಿಸಿದ ನಂತರದ ಕ್ರಮಗಳು ನಿಧಾನಗತಿಯಲ್ಲಿ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ವಿಳಂಬ ನಿವಾರಣೆಗೆ ಇರುವ ಅಡೆತಡೆಗಳೇನು ; ಯಾವಾಗ ನಿವೇಶನಗಳಿಗೆ ದರ ನಿಗಧಿ ಮಾಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು ?

## ಕೊಪ್ಪಳ ಜಿಲ್ಲೆಯಲ್ಲಿನ (ಎಂ.ವಿ.ಎಸ್) ಬಹು ಗ್ರಾಮ ಕುಡಿಯುವ ನೀರಿನ ಯೋಜನೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೩೮೧ (೭೮೯೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಪ್ಪಳ ಜಿಲ್ಲೆಯಲ್ಲಿನ (ಎಂ.ವಿ.ಎಸ್) ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆ ಸದ್ಯ ಯಾವ ಹಂತದಲ್ಲಿದೆ ;

(ಆ) ಸದರಿ ಯೋಜನೆಗೆ ಚಾಲನೆ ನೀಡಿದ್ದು ಯಾವಾಗ ;

(ಇ) ಯೋಜನೆಯ ಪ್ರಾರಂಭಿಕ ಹಂತದಲ್ಲಿ ಎಷ್ಟು ಮೊತ್ತದ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆ ದೊರಕಿರುತ್ತದೆ ; ಸದ್ಯ ಸದರಿ ಯೋಜನೆಗೆ ವ್ಯಯಿಸಲಾದ ಅನುದಾನ ಎಷ್ಟು ; (ವಿವರ ನೀಡುವುದು)

(ಈ) ಜಿಲ್ಲೆಯ ಯಾವ ಯಾವ ಭಾಗದ ಎಷ್ಟು ಗ್ರಾಮಗಳು ಸದರಿ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತವೆ ; (ವಿವರ ನೀಡುವುದು)

(ಉ) ಸದರಿ ಯೋಜನೆಯ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು ; ಸದರಿ ಯೋಜನೆಯನ್ನು ಯಾವಾಗ ಮುಕ್ತಾಯಗೊಳಿಸಲಾಗುವುದು ?

## ಶ್ರೀ ಎಸ್.ಜಿ. ನಂಜಯ್ಯನಮಠ ರವರ ಗ್ರಾಮಪಂಚಾಯಿತಿ ಪುನರ್ ವಿಂಗಡನಾ ಸಮಿತಿಯ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೩೮೨ (೨೮೯೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶ್ರೀ ಎಸ್.ಜಿ. ನಂಜಯ್ಯನಮಠ ರವರ ಗ್ರಾಮ ಪಂಚಾಯಿತಿ ಪುನರ್ ವಿಂಗಡನಾ ಸಮಿತಿಯ ಪ್ರಕಾರ ಎಷ್ಟು ಹೊಸ ಗ್ರಾಮ ಪಂಚಾಯಿತಿಗಳನ್ನು ರಚಿಸಲಾಗಿದೆ ;

(ಆ) ಹೊಸ ಗ್ರಾಮ ಪಂಚಾಯಿತಿಯಾದ ಗ್ರಾಮಗಳ ಹೆಸರು ಮತ್ತು ಈ ಗ್ರಾಮ ಪಂಚಾಯಿತಿಯ ಮೂಲಭೂತ ಸೌಲಭ್ಯಕ್ಕೆ ಸರ್ಕಾರ ಕೈಗೊಂಡ ಕ್ರಮದ ಮಾಹಿತಿ ನೀಡುವುದು ;

(ಇ) ಈ ಸೌಲಭ್ಯಗಳಿಗಾಗಿ ಸರ್ಕಾರ ಎಷ್ಟು ಹಣವನ್ನು ಮಂಜೂರು ಮಾಡಿದೆ ; ಮಂಜೂರಾದ ಹಣದಲ್ಲಿ ಸದ್ಯದ ಕಾರ್ಯಗಳು ಯಾವ ಹಂತದಲ್ಲಿ ಇವೆ ;

(ಈ) ಹೊಸ ಗ್ರಾಮ ಪಂಚಾಯತ್ ರಚನೆಯಾದ ನಂತರ ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆ ಎಷ್ಟು ;

(ಉ) ಕೊಪ್ಪಳ ಜಿಲ್ಲೆಯಲ್ಲಿ ಇರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ ಮತ್ತು ಸದಸ್ಯರ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಗ್ರಾಮ ಪಂಚಾಯತ್‌ಗಳಲ್ಲಿ ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಮೀಸಲಿಟ್ಟ ಅನುದಾನದ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೮೩ (೨೮೮೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪ನೇ ಮತ್ತು ೨೦೧೪–೧೫ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಸರ್ಕಾರದಿಂದ ಬಿಡುಗಡೆಯಾದ ಒಟ್ಟು ಅನುದಾನವೆಷ್ಟು ; (ಗ್ರಾಮ ಪಂಚಾಯತಿಗಳವಾರು, ತಾಲ್ಲೂಕುವಾರು ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಪ್ರತಿ ಗ್ರಾಮಪಂಚಾಯಿತಿಗಳಿಗೆ ಈ ಅನುದಾನದಲ್ಲಿ ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಮೀಸಲಿಟ್ಟ ಅನುದಾನ ಎಷ್ಟು ; (ಗ್ರಾಮ ಪಂಚಾಯಿತಿಗಳವಾರು ಸ್ಪಷ್ಟ ವಿವರಣೆ ಒದಗಿಸುವುದು)

(ಇ) ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಮೀಸಲಿಟ್ಟ ಅನುದಾನದಲ್ಲಿ ಕೈಗೊಂಡ ಕಾಮಗಾರಿಯ ಮಾಹಿತಿ ; ಈ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಕಾಮಗಾರಿಗಳಿಗೆ ತಗುಲಿದ ವೆಚ್ಚ ಎಷ್ಟು ; ಯಾವ ಯಾವ ಗ್ರಾಮಗಳಲ್ಲಿ ಯಾವ ಸ್ಥಳಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಅವುಗಳ ಸಂಪೂರ್ಣ

ಮಾಹಿತಿ ಒದಗಿಸುವುದು ? (ಗ್ರಾಮಗಳವಾರು, ಗ್ರಾಮ ಪಂಚಾಯಿತಿ, ತಾಲ್ಲೂಕುವಾರು ವಿವರ ನೀಡುವುದು)

## ಶುದ್ಧ ಕುಡಿಯುವ ನೀರಿನ ಘಟಕಗಳ ಕುರಿತು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೮೪ (೨೮೯೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಜಿಲ್ಲೆಗಳ ಎಷ್ಟು ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲು ಸರ್ಕಾರ ಮುಂದಾಗಿದೆ ;

(ಆ) ಈ ಪೈಕಿ ಎಷ್ಟು ಘಟಕಗಳಿಗೆ ಈಗಾಗಲೇ ವಿದ್ಯುತ್ ಹಾಗೂ ನೀರು ಸಂಪರ್ಕ ಒದಗಿಸಲಾಗಿದೆ ; ಇಲ್ಲದಿದ್ದಲ್ಲಿ ಕಾರಣಗಳೇನು ;

(ಇ) ಕೂಡಲೇ ನೀರು ಮತ್ತು ವಿದ್ಯುತ್ ಸಂಪರ್ಕಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ ; (ವಿವರ ನೀಡುವುದು)

(ಈ) ಇದಕ್ಕಾಗಿ ಕಳೆದ ೨ ವರ್ಷಗಳಲ್ಲಿ ಎಷ್ಟು ಹಣವನ್ನು ನಿಗಧಿಪಡಿಸಲಾಗಿತ್ತು ; ಎಷ್ಟು ಘಟಕ ಸ್ಥಾಪಿಸಲಾಗಿದೆ ;

(ಉ) ಈ ನಿಟ್ಟಿನಲ್ಲಿ ಗ್ರಾಮಾಂತರದ ಬೇಸಿಗೆ ಕಾಲದ ಕುಡಿಯುವ ನೀರಿನ ಶಾಶ್ವತ ಯೋಜನೆಗೆ ಸರ್ಕಾರ ಮುಂದಾಗುವುದೇ ಮತ್ತು ಯಾವ ಕ್ರಮಗಳನ್ನು ಹಮ್ಮಿಕೊಳ್ಳಲಿದೆ ? (ವಿವರ ನೀಡುವುದು)

## ಗ್ರಾಮಪಂಚಾಯಿತಿಗಳ ನಿರ್ವಹಣೆಗಾಗಿ ಅನುದಾನ ಬಿಡುಗಡೆಯ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೮೫ (೨೮೯೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ೨೦೧೩–೧೪ನೇ ಸಾಲಿನಲ್ಲಿ ಹಣಕಾಸು ಯೋಜನೆಯಡಿಯಲ್ಲಿ ನಿರ್ವಹಣೆಗಾಗಿ ಎಷ್ಟು ಅನುದಾನ ಮೀಸಲಿಡಲಾಗಿದೆ ; ಇಟ್ಟಿದ್ದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಎಷ್ಟು ; ಗ್ರಾಮ ಪಂಚಾಯಿತಿವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು ;

(ಆ) ಹಾಗಿದ್ದಲ್ಲಿ, ಗ್ರಾಮ ಪಂಚಾಯಿತಿಗಳಲ್ಲಿ ನಿರ್ವಹಣೆಗಾಗಿ ಮೀಸಲಿಟ್ಟ ಅನುದಾನವನ್ನು ಯಾವ ಯಾವ ಕಾಮಗಾರಿಗಳಿಗೆ ಬಳಕೆ ಮಾಡಲಾಗಿದೆ ; ಈ ಅನುದಾನ ಬಳಕೆ ಮಾಡಿಕೊಳ್ಳಲಾದ ಕಾಮಗಾರಿಗಳಾವುವು ; ಅವುಗಳಿಗೆ ತಗುಲಿದ ವೆಚ್ಚ ಎಷ್ಟು ; ಮಾಹಿತಿ ನೀಡುವುದು ;

(ಇ) ಈ ಅನುದಾನದಲ್ಲಿ ಎಲ್ಲೆಲ್ಲಿ ಯಾವ ಯಾವ ಗ್ರಾಮಗಳಲ್ಲಿ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೆ ಈ ಕಾಮಗಾರಿಗಳು ನಿರ್ವಹಿಸಿದ ಗುತ್ತಿಗೆದಾರರು ಯಾರು ಮತ್ತು ಕಾಮಗಾರಿಗಳನ್ನು ಟೆಂಡರ್ ಮೂಲಕ ನೀಡಲಾಗಿದೆಯೇ ? (ವಿವರಣೆ ಒದಗಿಸುವುದು)

## ಬೀದರ್ ನಗರದಲ್ಲಿನ ಕೊಳಗೇರಿ ಪ್ರದೇಶಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೮೬ (೨೮೮೮) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಗೆ ವಿವಿಧ ವಸತಿ ಯೋಜನೆಗಳಡಿ ಮಂಜೂರು ಮಾಡಿರುವ ಮನೆಗಳೆಷ್ಟು ; ಇದುವರೆಗೂ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಮನೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಅಪೂರ್ಣಗೊಂಡಿರುವ ಮನೆಗಳನ್ನು ಕೂಡಲೇ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಲು ಆಗಿರುವ ಅಡೆತಡೆಗಳೇನು ; ಕೂಡಲೇ ಮನೆಗಳನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಇ) ಬೀದರ್ ನಗರ ಪ್ರದೇಶದಲ್ಲಿರುವ ಕೊಳಚೆ ಪ್ರದೇಶಗಳಲ್ಲಿನ ವಾಸಿಗಳಿಗೆ ಮನೆಗಳ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಉತ್ತರ ಕರ್ನಾಟಕದಲ್ಲಿ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೮೭(೨೯೦೦) ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕರ್ನಾಟಕದಲ್ಲಿ ಸಣ್ಣ ಕೈಗಾರಿಕೆಗಳು ಆರ್ಥಿಕ ಸಹಾಯ ದೊರೆಯದೆ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಪ್ರಾದೇಶಿಕ ಅಸಮತೋಲನವನ್ನು ಸರಿದೂಗಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು ;

(ಇ) ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಅಭಿವೃದ್ಧಿ ನಿಗಮವು ಕಳೆದ ೦೩ ವರ್ಷಗಳಲ್ಲಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಲ್ಲಿ ಸಣ್ಣ ಕೈಗಾರಿಕಾ ಘಟಕಗಳಿಗೆ ಹಣದ ನೆರವು ನೀಡಿದ ವಿವರಗಳನ್ನು ಒದಗಿಸುವುದು ;

(ಈ) ಉತ್ತರ ಕರ್ನಾಟಕದಲ್ಲಿನ ಕೈಗಾರಿಕಾ ವಾತಾವರಣವನ್ನು ಸುಧಾರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದೇ ?

## ಕೈಗಾರಿಕಾ ಅಭಿವೃದ್ಧಿಯಲ್ಲಿನ ಪ್ರಾದೇಶಿಕ ಅಸಮತೋಲನ ಕುರಿತು

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೮೮(೨೮೯) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕರ್ನಾಟಕದಲ್ಲಿ ಕೇವಲ ೮೧ ಭಾರಿ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿದ್ದು, ದಕ್ಷಿಣ ಕರ್ನಟಕದಲ್ಲಿ ೨೧೧ಕ್ಕಿಂತ ಹೆಚ್ಚು ಕೈಗಾರಿಕೆ ಘಟಕಗಳಿರುವುದು ತೀವ್ರ ಪ್ರಾದೇಶಿಕ ಅಸಮತೋಲನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಕೈಗಾರಿಕಾ ಅಭಿವೃದ್ಧಿ ಕೈಗೊಳ್ಳುವ ಮೂಲಕ ಪ್ರಾದೇಶಿಕ ಅಸಮತೋಲನವನ್ನು ಸರಿದೂಗಿಸಲಾಗುವುದೇ ;

(ಇ) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಉತ್ತಮ ಕೈಗಾರಿಕಾ ವಾತಾವರಣವನ್ನು ನಿರ್ಮಿಸಲು ಯಾವ ಯಾವ ತುರ್ತು ಕ್ರಮಗಳನ್ನು ಕೈಗೊಳ್ಳಲಾಗುವುದು ?

## ಉತ್ತರ ಕರ್ನಾಟಕದಲ್ಲಿನ ಕೊಳಗೇರಿಗಳ ಅಭಿವೃದ್ಧಿ ಕುರಿತು

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೮೯ (೨೮೯೮) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕರ್ನಾಟಕದಲ್ಲಿನ ಕೊಳಗೇರಿಗಳಲ್ಲಿನ ಬದುಕಿನ ಸ್ಥಿತಿಗತಿಗಳು ತೀವ್ರವಾಗಿ ಕೆಟ್ಟದ್ದಾಗಿರುವ ಸತ್ಯಾಂಶಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಉತ್ತರ ಕರ್ನಾಟಕದಲ್ಲಿನ ಕೊಳಗೇರಿಗಳಲ್ಲಿ ಸ್ಥಿತಿ–ಗತಿಗಳನ್ನು ಸುಧಾರಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು ;

(ಇ) ಸದರಿ ಕೊಳಗೇರಿಗಳಲ್ಲಿ ಕುಡಿಯುವ ನೀರು, ಶೌಚಾಲಯ ಮತ್ತು ನೈರ್ಮಲ್ಯ ಕಾಪಾಡಲು ವಿಶೇಷ ಕಾರ್ಯ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದೇ ?

## ವಸತಿ ಕ್ಷೇತ್ರದಲ್ಲಿನ ಪ್ರಾದೇಶಿಕ ಅಸಮತೋಲನ ನಿವಾರಣೆ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೯೦ (೨೮೯೭) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕರ್ನಾಟಕಕ್ಕಿಂತ ಉತ್ತರ ಕರ್ನಾಟಕದಲ್ಲಿ ವಸತಿ ಕೊರತೆ ತೀವ್ರವಾಗಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನಾಗರಿಕರಿಗೆ ಸಮಾನ ಅವಕಾಶ, ಸೌಲಭ್ಯಗಳು ಮತ್ತು ನ್ಯಾಯ ದೊರಕಿಸಿ ಕೊಡುವುದು ಸರ್ಕಾರದ ಕರ್ತವ್ಯ ಅಲ್ಲವೇ ;

(ಇ) ಹಾಗಿದ್ದಲ್ಲಿ, ವಸತಿ ಕ್ಷೇತ್ರದಲ್ಲಿನ ಪ್ರಾದೇಶಿಕ ಅಸಮತೋಲನವನ್ನು ಸರಿದೂಗಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು ?

## ಉತ್ತರ ಕರ್ನಾಟಕದಲ್ಲಿನ ಪ್ರವಾಸಿ ಕೇಂದ್ರಗಳ ಅಭಿವೃದ್ಧಿ ಬಗ್ಗೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೯೧ (೨೮೯೬) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕರ್ನಾಟಕದಲ್ಲಿ ಜಗತ್‌ಪ್ರಸಿದ್ಧ ಪ್ರವಾಸಿ ತಾಣಗಳಿದ್ದರೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ದೇಶಿ ಮತ್ತು ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವಲ್ಲಿ ವಿಫಲಗೊಂಡಿರುವ ಸತ್ಯಾಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಉತ್ತಮ ದರ್ಜೆಯ ಹೋಟೆಲುಗಳು/ವಸತಿ ಗೃಹಗಳು, ಉತ್ತಮ ಸಂಪರ್ಕ ರಸ್ತೆಗಳು, ರಸ್ತೆ ಪಕ್ಕದ ಸೌಕರ್ಯಗಳು, ಸಾರಿಗೆ, ವಿಮಾನ ಮಾರ್ಗ ಮುಂತಾದ ಮೂಲಭೂತ ಸೌಕರ್ಯಗಳನ್ನು ಹೆಚ್ಚಾಗಿ ಕಲ್ಪಿಸುವ ಮೂಲಕ ಪ್ರಾದೇಶಿಕ ಅಸಮಾನತೆಯನ್ನು ಸರಿದೂಗಿಸಲು ವಿಶೇಷ ಕಾರ್ಯ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದೇ ;

(ಇ) ಈ ನಿಟ್ಟಿನಲ್ಲಿ ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಬಂಡವಾಳ ಒದಗಿಸಲಾಗುವುದೇ ?

## ಶಾಲಾ ಮಕ್ಕಳ ಬ್ಯಾಗ್ ಹೊರೆಯನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೩೯೨ (೨೯೦೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಒಂದನೇ ತರಗತಿಯಿಂದ ಎಂಟನೇ ತರಗತಿವರೆಗಿನ ಶಾಲಾ ಮಕ್ಕಳ ಬ್ಯಾಗ್ ಹೊರೆ ಕಡಿಮೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಆ) ರಾಜ್ಯ ಶಿಕ್ಷಣ ಸಂಶೋಧನೆ, ಪಾಲಕರು ಮತ್ತು ತರಬೇತಿ ನಿರ್ದೇಶನಾಲಯದವರು (ಡಿ.ಎಸ್.ಆರ್.ಟಿ.ಸಿ.) ಸಾರ್ವಜನಿಕರು ಮಕ್ಕಳ ಬ್ಯಾಗ್ ಹೊರೆ ಕಡಿಮೆ ಮಾಡಲು ಯಾವ ಯಾವ ಸಲಹೆಗಳನ್ನು ನೀಡಿರುವರು ;

(ಇ) ಬ್ಯಾಗ್ ಹೊರೆ ಕಡಿಮೆ ಮಾಡಲು ಕೇಂದ್ರದ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಇಲಾಖೆ (ಎಮ್.ಹೆಚ್.ಆರ್.ಡಿ) ಸಹ ರಾಜ್ಯ ಸರ್ಕಾರಕ್ಕೆ ಸೂಚಿಸಿದ ಸಂಗತಿ ನಿಜವೇ ;

(ಈ) ಪಾಲಕರು ನೀಡಿರುವ ಸಲಹೆಗಳೇನು ; ಶಿಕ್ಷಣ ತಜ್ಞರ ಸಲಹೆಗಳೇನು ; ಸಾರ್ವಜನಿಕರು ನೀಡಿರುವ ಸಲಹೆಗಳೇನು ;

(ಉ) ವಿದ್ಯಾರ್ಥಿಗಳು ಎಷ್ಟು ತೂಕದ ಬ್ಯಾಗುಗಳನ್ನು (ತರಗತಿ ಪ್ರಕಾರ) ಹೊರುತ್ತಿರುವರು ; ಇದನ್ನು ಕಡಿಮೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗುತ್ತಿದೆ ?

## IT ಮತ್ತು B.T ಕ್ಷೇತ್ರದಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗವಕಾಶ ನೀಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೩೯೩ (೨೯೧೮) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಐ.ಟಿ. ಮತ್ತು ಬಿ.ಟಿ ಇನ್ನಿತರ ಉದ್ಯಮ ಸಂಸ್ಥೆಗಳ ನೇಮಕಾತಿಗಳಲ್ಲಿ ಕನ್ನಡಿಗರಿಗೆ ಭಾರಿ ಅನ್ಯಾಯವಾಗುತ್ತಿದ್ದು, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿದೆ ;

(ಆ) ಡಾ: ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಸವದತ್ತಿ ತಾಲ್ಲೂಕಿನ ಮುರಗೋಡ ಕ್ಷೇತ್ರಕ್ಕೆ ಮೂಲಭೂತ ಸೌಲಭ್ಯ ಒದಗಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೩೯೪ (೨೯೧೯) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮವು ಒಂದು ಪ್ರವಾಸಿ ಸ್ಥಳವಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮುರಗೋಡ ಶ್ರೀ ದುರದುಂಡೇಶ್ವರ ಮಹಾಂತಜ್ಜನ ಗದ್ದುಗೆಯ ದರ್ಶನ ಪಡೆದು ಮುಂದೆ ಪ್ರವಾಸಿಗರು ಪ್ರೇಕ್ಷಣಿಯ ಸ್ಥಳವಾದ ಶ್ರೀ ಕ್ಷೇತ್ರ ಸೊಗಲಕ್ಕೆ ಹೋಗುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇಲ್ಲಿಗೆ ಆಗಮಿಸುವ ಪ್ರವಾಸಿಗರಿಗೆ ಶುದ್ಧ ಕುಡಿಯುವ ನೀರು, ಸುಸಜ್ಜಿತ ಮೂತ್ರಾಲಯ, ಶೌಚಾಲಯ ಹಾಗೂ ಇನ್ನಿತರೆ ಮೂಲಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ ?

## ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆ ನೀತಿ ಸರಿಪಡಿಸುವ ಕುರಿತು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೩೯೫ (೭೯೨೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆ ನೀತಿಯಲ್ಲಿ ಕೆಲವೊಂದು ನ್ಯೂನ್ಯತೆಗಳು ಇರುವುದು ನಿಜವೇ ;

(ಆ) ವಿಶೇಷವಾಗಿ ಪತಿ–ಪತ್ನಿಯವರ ವರ್ಗಾವಣೆಯಲ್ಲಿ ಆಗಿತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಾದರೆ, ವರ್ಗಾವಣೆ ನೀತಿಯಲ್ಲಿ ಕೆಲವೊಂದು ಮಾರ್ಪಾಡು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ;

(ಈ) ವರ್ಗಾವಣೆ ನೀತಿಯ ಮಾರ್ಪಾಡಿಗೆ ಎಷ್ಟು ಸಮಯ ಬೇಕಾಗುತ್ತದೆ ; ಇದು ಯಾವಾಗ ಜಾರಿಗೆ ಬರಲಿದೆ ?

## ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪ್ರವೇಶ ಸಂಖ್ಯೆಯನ್ನು ಹೆಚ್ಚಳ ಮಾಡಲು ಕ್ರಮವಹಿಸುವ ಕುರಿತು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೨೩೯೬ (೭೯೨೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ಕಿರಿಯ ಪ್ರಾಥಮಿಕ ಶಾಲೆಗಳಿವೆ ;

(ಆ) ಇವುಗಳ ಪೈಕಿ ಕಳೆದ ಶೈಕ್ಷಣಿಕ ವರ್ಷದಲ್ಲಿ ಅತಿ ಕಡಿಮೆ ವಿದ್ಯಾರ್ಥಿಗಳನ್ನು ಹೊಂದಿರುವ ಶಾಲೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯನ್ನು ಹೆಚ್ಚಳ ಮಾಡಲು ಯಾವ ಕ್ರಮಕೈಗೊಳ್ಳಲಾಗಿದೆ ?

## ಕೇಂದ್ರ ಸರ್ಕಾರದ ಪ್ರಯತ್ನಗಳಿಂದ ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆ

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೨೩೯೭ (೩೧೩೫) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭಾರತ ದೇಶದ ಹಾಲಿ ಪ್ರಧಾನ ಮಂತ್ರಿಗಳು ಮತ್ತು ಹಾಲಿ ಕೇಂದ್ರ ಸರ್ಕಾರದ ಪ್ರಯತ್ನಗಳಿಂದ ಎಷ್ಟು ವಿದೇಶಿ ಉದ್ಯಮಿಗಳು/ಸಂಸ್ಥೆಗಳು ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿವೆ ; ಸ್ಥಾಪನೆ/ ಬಂಡವಾಳ/ಪ್ರಸ್ತಾವನೆಗಳ ಅನುಷ್ಠಾನದ ಹಂತಗಳ ವಿವರಗಳನ್ನು ನೀಡುವುದು ;

(ಆ) ಸ್ವೀಕರಿಸಿದ ಪ್ರಸ್ತಾವನೆಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ಬಂಡವಾಳ/ಕೈಗಾರಿಕೆಗಳು ಹಿಂದಿರುಗಿಸುವ ಉದಾಹರಣೆಗಳು ಇವೆಯೇ ?

## ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೩೯೮ (೨೯೦೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಯಲ್ಲಿ ಎಷ್ಟು ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ;

(ಆ) ಈ ಯೋಜನೆಯುನ್ನು ಪೂರ್ಣಗೊಂಡಿರುವ ಹಾಗೂ ಅಪೂರ್ಣವಿರುವ ಕಾಮಗಾರಿಗಳು ಎಷ್ಟು; ಅವು ಯಾವುವು; (ಕಾಮಗಾರಿವಾರು ವಿವರ ನೀಡುವುದು)

(ಇ) ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳಿಂದ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಒದಗಿಸಲಾಗುತ್ತಿದೆಯೇ ;

(ಈ) ಪ್ರತಿಯೊಂದು "ಬಹು ಗ್ರಾಮ ಯೋಜನೆಯ" ಅಂದಾಜು ವೆಚ್ಚ ಬಿಡುಗಡೆಯಾದ ವೆಚ್ಚ ಹಾಗೂ ಖರ್ಚಾದ ವೆಚ್ಚದ ಮಾಹಿತಿಯನ್ನು ಒದಗಿಸುವುದು ?

## ALL WEATHER HELIPAD ನಿರ್ಮಾಣ ಮಾಡುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೩೯೯ (೨೯೦೫) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ಮುಂಬರುವ ದಿನಗಳಲ್ಲಿ ಹೆಲಿ ಟೂರಿಸಂ, ಹೆಲಿ ಆಂಬ್ಯೂಲೆನ್ಸ್ ಸರ್ವಿಸ್ ಹಾಗೂ ವಿಶೇಷ ಪರಿಸ್ಥಿತಿಗಳಲ್ಲಿ ಅನೂಕೂಲವಾಗುವಂತೆ ಎಲ್ಲ ತಾಲ್ಲೂಕುಗಳಲ್ಲಿ ಎಲ್ಲಾ ಹವಾಮಾನಗಳಿಗೆ ಲಭ್ಯವಾಗುವ All Weather helipad ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳಾವುವು ? (ತಾಲ್ಲೂಕುವಾರು ವಿವರ ನೀಡುವುದು)

## ರಾಜ್ಯದಲ್ಲಿ ಶುದ್ಧ ಕುಡಿಯುವ ನೀರು ಒದಗಿಸಲು ಸರ್ಕಾರ ಕೈಗೊಂಡ ಕ್ರಮದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೪೦೦ (೨೯೦೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪ್ಲೋರೈಡ್, ಅರ್ಸಾನಿಕ ಹಾಗೂ ನೈಟ್ರೇಟ್ ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಈ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು R.O. ಪ್ಲಾಂಟ್‌ಗಳನ್ನು ಅಳವಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ;

(ಇ) ಕೈಗೊಂಡಿದ್ದಲ್ಲಿ, ಎಷ್ಟು ಸ್ಥಳಗಳಲ್ಲಿ ಇವುಗಳನ್ನು ಅಳವಡಿಸಲಾಗಿದೆ ; ಪ್ರತಿ ಘಟಕಕ್ಕೆ (Unit) ಖರ್ಚು ಮಾಡಿದ ಹಣವೆಷ್ಟು ?

## ಐ.ಹೆಚ್.ಎಸ್.ಡಿ.ಸಿ. ಯೋಜನೆಯಡಿ ಹಮ್ಮಿಕೊಳ್ಳಲಾದ ಐ.ಇ.ಸಿ. ಕಾರ್ಯಕ್ರಮಗಳು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೪೦೧ (೨೯೩೧) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಐ.ಹೆಚ್.ಎಸ್.ಡಿ.ಪಿ. (Intergated Housing Slum Development Programme) ಯೋಜನೆಯಡಿ ಮಂಜೂರಾಗಿರುವ ಐ.ಇ.ಸಿ. (Information Education and Communication) ಕಾರ್ಯಕ್ರಮಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು ;

(ಆ) ಈ ಅನುದಾನದಲ್ಲಿ ಕೊಳಚೆ ನಿವಾಸಿಗಳಿಗೆ ಸಾಮಾಜಿಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೇ ; ಹಾಗಿದ್ದಲ್ಲಿ, ಕಾರ್ಯಕ್ರಮವನ್ನು ಎಲ್ಲಿ ಮತ್ತು ಯಾವಾಗ ಹಮ್ಮಿಕೊಳ್ಳಲಾಗಿತ್ತು ;

(ಇ) ಮಂಡಳಿಯಲ್ಲಿ ಐ.ಇ.ಸಿ. ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ; ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವ ಸ್ವಯಂ ಸೇವಾ ಸಂಸ್ಥೆಗಳು (N.G.O.) ಸಂಸ್ಥೆಯವರಿಗೆ ಕಳೆದ ಒಂದು ವರ್ಷದಿಂದ ಹಣ ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಣ ಪಾವತಿಸದೇ ಇರುವುದಕ್ಕೆ ಕಾರಣವೇನು ; ಸರ್ಕಾರ ಬಿಡುಗಡೆ ಮಾಡಿರುವ ಹಣ ಖರ್ಚು ಮಾಡದೇ ಇರುವುದಕ್ಕೆ ಸಿ.ಎ.ಜಿ. (C.A.G) ವರದಿಯಲ್ಲಿ ಉಲ್ಲೇಖಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಕೊಳಚೆ ನಿವಾಸಿಗಳಿಗೆ ಸಾಮಾಜಿಕ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ನೀಡಿರುವ ಅನುದಾನವನ್ನು ಖರ್ಚು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಏನು ಕ್ರಮ ಜರುಗಿಸಲಾಗಿದೆ ?

## ರಾಜ್ಯದಲ್ಲಿ ಐ.ಟಿ.ಸಿ. ಫೇಸ್–೨ ಕಂಪ್ಯೂಟರ್ ಶಿಕ್ಷಣ ಯೋಜನೆ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೪೦೨ (೨೯೨೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಐ.ಟಿ.ಸಿ. ಫೇಸ್–೨ರ ಕಂಪ್ಯೂಟರ್ ಶಿಕ್ಷಣ ಯೋಜನೆ ಸ್ಥಗಿತಗೊಂಡು ಇದರಿಂದ ಸುಮಾರು ೧೦ ಲಕ್ಷ ವಿದ್ಯಾರ್ಥಿಗಳು ಕಂಪ್ಯೂಟರ್ ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಐ.ಟಿ.ಸಿ. ಫೇಸ್–೨ರ ಕಂಪ್ಯೂಟರ್ ಶಿಕ್ಷಣ ಯೋಜನೆಯನ್ನು ಮುಂದುವರಿಸುವಂತೆ ಎಷ್ಟು ಜನ ಪ್ರತಿನಿಧಿಗಳು ಮತ್ತು ಸಂಘ ಸಂಸ್ಥೆಗಳು ಮನವಿ ಪತ್ರ ಸಲ್ಲಿಸಿದ್ದಾರೆ ; (ಅವರ ಹೆಸರು ಮತ್ತು ಪತ್ರದ ದಿನಾಂಕವನ್ನು ತಿಳಿಸುವುದು)

(ಇ) ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ಭಾಗ್ಯ ನೀಡಲು ಸರ್ಕಾರಕ್ಕೆ ಇರುವ ತೊಂದರೆ ಯಾವುದು ;

(ಈ) ಐ.ಟಿ.ಸಿ. ಫೇಸ್–೨ ಶಾಲಾ ಕಾಲೇಜುಗಳಲ್ಲಿ ಕಂಪ್ಯೂಟರ್ ಲ್ಯಾಬ್‌ಗಳಿದ್ದು ಹಿಂದೆ ಕಲಿಸುತ್ತಿದ್ದ ಕಂಪ್ಯೂಟರ್ ಶಿಕ್ಷಕರನ್ನೇ ಬಳಕೆ ಮಾಡಿಕೊಂಡು ಕಂಪ್ಯೂಟರ್ ಶಿಕ್ಷಣವನ್ನು ನೀಡಬಹುದಲ್ಲವೇ ?

## ೨೦೧೫–೧೬ನೇ ಸಾಲಿನ ವರೆಗೆ ಪ್ರಾರಂಭಗೊಂಡ ಶಿಕ್ಷಣ ಸಂಸ್ಥೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೪೦೩ (೨೯೦೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬ನೇ ಸಾಲಿನವರೆಗೆ ಪ್ರಾರಂಭಗೊಂಡು ವೇತನಾನುದಾನಕ್ಕೆ ಒಳಪಡದ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಶಿಕ್ಷಣ ಸಂಸ್ಥೆವಾರು, ಮಾಹಿತಿ ನೀಡುವುದು)

(ಇ) ಈ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯನ್ನು ವೇತನಾನುದಾನಕ್ಕೆ ಒಳಪಡಿಸಲು ಬೇಕಾಗಬಹುದಾದ ಅನುದಾನ ಎಷ್ಟು ;

(ಈ) ಈ ಶಿಕ್ಷಣ ಸಂಸ್ಥೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರ ಉದ್ದೇಶಿಸಿದೆಯೇ ; ಹಾಗಿದ್ದಲ್ಲಿ, ಯಾವ ದಿನಾಂಕದಿಂದ ಈ ಶಿಕ್ಷಣ ಸಂಸ್ಥೆಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗುವುದು ?

## ನೂತನ ಪಿಂಚಣಿ ಯೋಜನೆಯ ಅನುಷ್ಠಾನದ ತೊಂದರೆಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೪೦೪ (೨೯೦೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ದಿನಾಂಕ: ೦೧–೦೪–೨೦೦೬ರ ನಂತರ ನೇಮಕಗೊಂಡ ಹಾಗೂ ಅನುದಾನಕ್ಕೊಳಪಟ್ಟ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ವಿಭಾಗಗಳ ಮಾಹಿತಿ ನೀಡುವುದು)

(ಆ) ಈ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆ ಜಾರಿಗೊಳಿಸಲು ಆಡಳಿತ ಮಂಡಳಿಯವರು ತಮ್ಮ ಪಾಲಿನ ಶೇಕಡಾ ೧೦ರ ವಂತಿಗೆಯನ್ನು ಭರಿಸದಿರುವುದರಿಂದ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಆಡಳಿತ ಮಂಡಳಿಯವರು ಭರಿಸಬೇಕಾದ ವಂತಿಕೆಯನ್ನು ಸರ್ಕಾರದಿಂದ ಭರಿಸುವುದರ ಮೂಲಕ ಈ ಸಿಬ್ಬಂದಿಗೆ ಅನುಕೂಲ ಮಾಡಿಕೊಡಲು ಉದ್ದೇಶಿಸಿದೆಯೇ;

(ಈ) ಹಾಗಿದ್ದಲ್ಲಿ, ಸರ್ಕಾರ ಈ ಕುರಿತು ಯಾವಾಗ ಆದೇಶ ಹೊರಡಿಸಲಿದೆ?

## ಭಾಷಾ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೪೦೫ (೨೯೨೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿರುವುದು ನಿಜವೇ;

(ಆ) ಈ ಕುರಿತು ಸರ್ಕಾರ ಅಥವಾ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆಯೇ, ಹೊರಡಿಸಿದ್ದಲ್ಲಿ ಯಾವ ಆಧಾರದ ಮೇಲೆ ಈ ಆದೇಶ ಹೊರಡಿಸಲಾಗಿದೆ;

(ಇ) ರಾಜ್ಯದಲ್ಲಿ ಯಾವ ಯಾವ ಭಾಷೆಗಳನ್ನು ಅಲ್ಪಸಂಖ್ಯಾತ ಭಾಷೆಗಳು ಎಂದು ಪರಿಗಣಿಸಿ ಸರ್ಕಾರಿ ಆದೇಶ ಹೊರಡಿಸಿದೆ;

(ಈ) ಸರ್ಕಾರಿ ಆದೇಶ ಇರದಿದ್ದರೂ ೧೭೮ ಶಿಕ್ಷಣ ಸಂಸ್ಥೆಗಳಿಗೆ ಭಾಷಾ ಅಲ್ಪಸಂಖ್ಯಾತ ಮಾನ್ಯತೆ ನೀಡಿದ್ದು ಸಮಂಜಸವೇ;

(ಉ) ಈ ಕುರಿತು ಇರುವ ಗೊಂದಲಗಳನ್ನು ಪರಿಹರಿಸಿ ಸಂವಿಧಾನದ ಪರಿಚ್ಛೇಧ ೩೦(೧) ರನ್ವಯ ಹೊಸ ಆದೇಶವನ್ನು ಯಾವಾಗ ಹೊರಡಿಸಲಾಗುವುದು?

## ವಸತಿ ಯೋಜನೆ ಫಲಾನುಭವಿಗಳು

**ಶ್ರೀ ನಾರಾಯಣ ಸಾ. ಬಾಂಡಗೆ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೦೬ (೨೯೪೭) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬ನೇ ಸಾಲಿನಲ್ಲಿ ಬಾಗಲಕೋಟೆ, ಗದಗ, ವಿಜಯಪುರ ಜಿಲ್ಲೆಗಳಿಗೆ ವಸತಿ ಯೋಜನೆಯಡಿ ಬಿಡುಗಡೆ ಮಾಡಿರುವ ಹಣವೆಷ್ಟು; ಖರ್ಚಾಗಿರುವ ಹಣವೆಷ್ಟು;

(ಆ) ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳಿಗೆ ಯಾವ ಮಾನದಂಡ ಅನುಸರಿಸಿ ವಸತಿ ಗೃಹಗಳನ್ನು ಹಂಚಿಕೆ ಮಾಡಲಾಗುತ್ತಿದೆ; (ವಿವರ ನೀಡುವುದು)

(ಇ) ಆಯ್ಕೆಯಾದ ಫಲಾನುಭವಿಗಳಿಗೆ ವಿವಿಧ ವಸತಿ ಯೋಜನೆಯಡಿ ಮನೆ ಕಟ್ಟಿಕೊಳ್ಳಲು ನೀಡಲಾಗುತ್ತಿರುವ ಹಣವೆಷ್ಟು; ಹಾಲಿ ನೀಡುತ್ತಿರುವ ಹಣವನ್ನು ಹೆಚ್ಚಿಗೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ, ಉದ್ದೇಶಿಸಿರುವ ಹಣ ಎಷ್ಟು? (ವಿವರ ನೀಡುವುದು)

## ವಸತಿ ರಹಿತ ಕುಟುಂಬಗಳ ಬಗ್ಗೆ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೪೦೭ (೨೯೧೬) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ವಸತಿ ರಹಿತ ಕುಟುಂಬಗಳ ಸಂಖ್ಯೆ ಎಷ್ಟು; ಆ ಪೈಕಿ ಎಷ್ಟು ಕುಟುಂಬಗಳಿಗೆ ಮನೆಗಳನ್ನು ಹಂಚಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಆ) ವಸತಿ ರಹಿತ ಕುಟುಂಬಗಳಿಗೆ ಹೊಸ ವಸತಿ ಯೋಜನೆಗಳನ್ನು ತ್ವರಿತವಾಗಿ ಮನೆಗಳನ್ನು ಮಂಜೂರು ಮಾಡಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಯೋಜನಾವಾರು ವಿವರ ನೀಡುವುದು?

## ಬಾಗಲಕೋಟೆ–ಕುಡಚಿ ರೈಲ್ವೆ ಮಾರ್ಗ ನಿರ್ಮಾಣ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೪೦೮ (೨೯೧೫) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಗಲಕೋಟೆ–ಕುಡಚಿ ರೈಲ್ವೆ ಮಾರ್ಗ ನಿರ್ಮಾಣಕ್ಕೆ ರೈತರಿಂದ ವಶಪಡಿಸಿಕೊಂಡ ಭೂಮಿ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಪ್ರಕ್ರಿಯೆಯು ಯಾವ ಯಾವ ಹಂತದಲ್ಲಿ ಇದೆ; ಯಾವ ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳ್ಳುತ್ತದೆ;

(ಇ) ಈ ರೈಲ್ವೆ ಮಾರ್ಗ ನಿರ್ಮಾಣಕ್ಕೆ ರಾಜ್ಯ ಸರ್ಕಾರದ ಪಾಲು ಎಷ್ಟು ಮತ್ತು ಕೇಂದ್ರ ಸರ್ಕಾರದ ಪಾಲು ಎಷ್ಟು? (ಸಂಪೂರ್ಣ ವಿವರ ನೀಡುವುದು)

## ಕರಾವಳಿ ಕರ್ನಾಟಕದಲ್ಲಿ ಪ್ರವಾಸೋದ್ಯಮ ಪ್ರೋತ್ಸಾಹ ನೀಡುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೪೦೯ (೨೯೨೬) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರಾವಳಿ ಕರ್ನಾಟಕದಲ್ಲಿ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡಲು ಇಲಾಖೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು; ಸದರಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬಿಡುಗಡೆಗೊಳಿಸಿದ ಅನುದಾನ ಎಷ್ಟು; ಈ ಕಾರ್ಯಕ್ರಮದಲ್ಲಿ ಬೀಚ್‌ಗಳನ್ನು ಅಭಿವೃದ್ಧಿಗೊಳಪಡಿಸಲಾಗಿದೆಯೇ;

(ಆ) ಕರಾವಳಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ಮಾಡಲು ಪ್ರತ್ಯೇಕ **"ಕರಾವಳಿ ಪ್ರವಾಸೋದ್ಯಮ ನಿಗಮ'** ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮ ಬೆಳವಣಿಗೆಯಾಗದೇ ಇರಲು ಕಾರಣಗಳೇನು; (ವಿವರ ನೀಡುವುದು)

(ಈ) ಪ್ರವಾಸೋದ್ಯಮಕ್ಕೆ (CRZ) ನಿಯಮದಿಂದ ಅಭಿವೃದ್ಧಿಗೊಂಡಿಲ್ಲ ಎಂಬುದು ನಿಜವೇ; ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು;

(ಉ) ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಕರಾವಳಿ ಜಿಲ್ಲೆಯಲ್ಲಿ ಕೈಗೊಂಡಿರುವ ಯೋಜನೆಗಳಾವುವು? (ವಿವರ ನೀಡುವುದು)

## ರಾಜ್ಯದಲ್ಲಿ ಅನುದಾನಿತ ಶಾಲಾ ಶಿಕ್ಷಕರಿಗೆ ಜ್ಯೋತಿ ಸಂಜೀವಿನಿ ಯೋಜನೆಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೪೧೦ (೭೯೨೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ನಗರವನ್ನು ಬಿ. ಸಿಟಿಯನ್ನಾಗಿ ಘೋಷಿಸಿ ಶೇ. ೨೦ರಷ್ಟು ಮನೆ ಬಾಡಿಗೆ ಭತ್ಯೆ ಏರಿಕೆ ಮಾಡಿದ್ದರೂ ಅನುದಾನಿತ ಶಾಲಾ ಶಿಕ್ಷಕರಿಗೆ ಈ ಯೋಜನೆಯನ್ನು ವಿಸ್ತರಿಸದಿರಲು ಕಾರಣವೇನು; ಅನುದಾನಿತ ಶಾಲಾ ಶಿಕ್ಷಕರು ಸರ್ಕಾರಿ ನೌಕರರಲ್ಲವೇ; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಅನುದಾನಿತ ಶಾಲಾ ಶಿಕ್ಷಕರಿಗೆ ಜ್ಯೋತಿ ಸಂಜೀವಿನಿ ಯೋಜನೆಯನ್ನು ವಿಸ್ತರಿಸದಿರಲು ಕಾರಣವೇನು; ಈ ಬಗ್ಗೆ ಇರುವ ತೊಂದರೆ ಏನು; (ವಿವರ ಒದಗಿಸುವುದು)

(ಇ) ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆಧಾರ್ ಕಾರ್ಡು ಮಾಡುವ ಜವಾಬ್ದಾರಿ ನೀಡಿರುವುದರಿಂದ ಬೋಧನಾ ಸಮಯ ಕಡಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಸ್ತುತ ಶಿಕ್ಷಕರಿಗೆ ಪಠ್ಯೇತರ ಚಟುವಟಿಕೆಗಳನ್ನು ನೀಡುವುದು ಸರಿಯೇ? (ವಿವರ ನೀಡುವುದು)

## ಮಂಗಳೂರು ವಿಮಾನ ನಿಲ್ದಾಣದ ನಿರ್ಗಮನ ರಸ್ತೆ ಪೂರ್ಣಗೊಳಿಸುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೪೧೧ (೨೯೨೪) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರು ವಿಮಾನ ನಿಲ್ದಾಣದ ನಿರ್ಗಮನ ರಸ್ತೆ ಪೂರ್ಣಗೊಳ್ಳದೇ ಇರಲು ಕಾರಣಗಳೇನು; ಪೂರ್ಣಗೊಳ್ಳುವುದು ಯಾವಾಗ; ಇದಕ್ಕೆ ತಗಲಿದ ವೆಚ್ಚ ಎಷ್ಟು; (ವಿವರ ನೀಡುವುದು)

(ಆ) ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು; ಭೂ ಸ್ವಾಧೀನತೆ ಹಾಗೂ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಸರ್ಕಾರದ ಮುಂದಿರುವ ಯೋಜನೆಗಳಾವುವು; (ವಿವರ ನೀಡುವುದು)

(ಇ) ರಾಜ್ಯ/ಕೇಂದ್ರ ಸರ್ಕಾರ ಒದಗಿಸಿದ ಅನುದಾನದ ಪಾಲೆಷ್ಟು; (ವಿವರ ನೀಡುವುದು)

(ಈ) ಮಂಗಳೂರು ವಿಮಾನ ನಿಲ್ದಾಣಕ್ಕೆ ಜಾಹೀರಾತು ಫಲಕ ಹಾಗೂ ವಿವಿಧ ಮೂಲಗಳಿಂದ ದೊರೆಯುವ ಆದಾಯ ಎಷ್ಟು? (ವಿವರ ಒದಗಿಸುವುದು)

## ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಛೇರಿಯಲ್ಲಿ ಸೌರಶಕ್ತಿ ಅಳವಡಿಸುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೪೧೨ (೨೯೨೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ವ್ಯಾಪ್ತಿಯ ಕಛೇರಿಗಳಲ್ಲಿ ಸೌರಶಕ್ತಿ ಮೇಲ್ಛಾವಣಿಗಳನ್ನು ಅಳವಡಿಸಲು ಇಲಾಖೆ ಕ್ರಮ ಕೈಗೊಂಡಿದೆಯೇ; (ವಿವರ ನೀಡುವುದು)

(ಆ) ಗ್ರಾಮ ಮಟ್ಟದ ವ್ಯಾಪ್ತಿಯಲ್ಲಿ ಸೋಲಾರ್ ದೀಪಗಳನ್ನು ಅಳವಡಿಸಲಾಗಿದೆಯೇ; ಇದಕ್ಕೆ ಖರ್ಚು ಮಾಡಿದ ಅನುದಾನ ಎಷ್ಟು; (ವಿವರ ನೀಡುವುದು)

(ಇ) ಎಲ್ಲಾ ಇಲಾಖೆಗಳಲ್ಲಿ ಸೋಲಾರ್ ಮೇಲ್ಛಾವಣಿ ಸ್ಥಾಪಿಸಿ ವಿದ್ಯುತ್ ಉತ್ಪಾದಿಸಲು ಮತ್ತು ಈ ಬಗ್ಗೆ ಜನ ಸಾಮಾನ್ಯರಿಗೆ ಅರಿವು ಮೂಡಿಸಲು ಇಲಾಖೆ ಕೈಗೊಂಡ ಕ್ರಮಗಳೇನು; ಇದಕ್ಕೆ ರಾಜ್ಯ ಸರ್ಕಾರ ಒದಗಿಸಿರುವ ಅನುದಾನ ಎಷ್ಟು; (ವಿವರ ನೀಡುವುದು)

(ಈ) ರಾಜ್ಯದ ಎಷ್ಟು ಜಿಲ್ಲಾ ಕೇಂದ್ರ ಕಛೇರಿಗಳಲ್ಲಿ ಸೋಲಾರ್ ಮೇಲ್ಛಾವಣಿಯನ್ನು ಅಳವಡಿಸಲಾಗಿದೆ;

(ಉ) ೨೫೦೦ ಚದರ ಅಡಿಗಿಂತ ಹೆಚ್ಚು ಮನೆ ನಿರ್ಮಾಣ ಮಾಡಲು ಪರವಾನಿಗೆ ಹಾಗೂ ಉದ್ದಿಮೆಗಳಿಗೆ ಪರವಾನಿಗೆ ನೀಡುವ ಸಂದರ್ಭದಲ್ಲಿ ಸೋಲಾರ್ ಅಳವಡಿಸಲು ಇಲಾಖೆ ನಿರ್ದೇಶನ ನೀಡುವುದೇ; ಈ ಬಗ್ಗೆ ಇಲಾಖೆಯ ಪರಿಶೀಲನೆಯಲ್ಲಿದೆಯೇ? (ವಿವರ ನೀಡುವುದು)

## ಕಲಬುರಗಿಯಲ್ಲಿ ಸ್ಥಾಪಿಸಲಾಗುತ್ತಿರುವ ವಿಮಾನ ನಿಲ್ದಾಣದ ಯೋಜನೆ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೪೧೩ (೯೩೩) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿಯಲ್ಲಿ ಸ್ಥಾಪಿಸಲಾಗುತ್ತಿರುವ ವಿಮಾನ ನಿಲ್ದಾಣದ ಯೋಜನೆಯನ್ನು ಸರ್ಕಾರ ರದ್ದುಪಡಿಸಿದೆಯೇ; ರದ್ದುಪಡಿಸಿದ್ದಲ್ಲಿ ಕಾರಣಗಳನ್ನು ತಿಳಿಸುವುದು;

(ಆ) ಮುಂದುವರೆಸಿದ್ದರೆ, ಕಳೆದ ಐದು ವರ್ಷದಲ್ಲಿ ಆಗಿರುವ ಪ್ರಗತಿ ವಿವರ ನೀಡುವುದು; (ವರ್ಷವಾರು ವೆಚ್ಚವಾರು ಕಾಮಗಾರಿಯ ವಿವರ ನೀಡುವುದು)

(ಇ) ಸ್ಥಗಿತಗೊಂಡಿರುವಂತಹ ಸದರಿ ವಿಮಾನ ನಿಲ್ದಾಣದ ಕಾಮಗಾರಿ ಪುನಃ ನಿರ್ಮಿಸಲು ಸರ್ಕಾರ ಮುಂದಾಗುವುದೇ; ಇದ್ದರೆ, ಸರ್ಕಾರದ ಮುಂದಿರುವ ಕ್ರಮಗಳೇನು?

## ಹೈದರಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ಕೈಗೊಂಡ ಕಾಮಗಾರಿಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೪೧೪ (೯೩೨) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳು ಹಾಗೂ ಹರಪನಹಳ್ಳಿ ಸೇರಿದಂತೆ ನಿರ್ಮಿತಿ ಕೇಂದ್ರದ ವತಿಯಿಂದ ಕಳೆದ ೫ ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳೆಷ್ಟು; (ವರ್ಷವಾರು, ಜಿಲ್ಲೆವಾರು, ಕಾಮಗಾರಿ ಮೊತ್ತವಾರು ವಿವರ ನೀಡುವುದು)

(ಆ) ನಿರ್ಮಿತಿ ಕೇಂದ್ರದ ವತಿಯಿಂದ ಕೈಗೊಂಡ ಕಾಮಗಾರಿಗಳಿಗೆ ಕೆ.ಟಿ.ಪಿ.ಪಿ. ಕಾಯ್ದೆಯಂತೆ ೪(ಜಿ) ವಿನಾಯಿತಿ ನೀಡಲಾಗಿದೆಯೇ; ನೀಡಿದ್ದರೆ, ಯಾವ ಷರತ್ತಿನೊಂದಿಗೆ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಮೊತ್ತಕ್ಕೆ ನೀಡಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಇ) ನಿರ್ಮಿತಿ ಕೇಂದ್ರವು ಕಾರ್ನಿಕ್ (ಕರ್ನಾಟಕ ರಾಜ್ಯ ನಿರ್ಮಾಣ ಕೇಂದ್ರ) ಸಂಸ್ಥೆಯ ಷರತ್ತು/ನಿಯಮಗಳು ಹಾಗೂ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆಯಂತೆ ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಪರಿಸರ ಪ್ರೇಮಿ, ಪರಿಣಾಮಕಾರಿ ತಂತ್ರಜ್ಞಾನ ಅಳವಡಿಸಲಾಗಿದೆಯೇ; ಇದ್ದರೆ, ಸಿಬ್ಬಂದಿಗಳಿಗೆ ತಾಂತ್ರಿಕ ತರಬೇತಿ, ಆರ್& ಡಿ ಯಂತ್ರೋಪಕರಣಗಳ ವಿವರ ನೀಡುವುದು;

(ಈ) ಮೇಲ್ಕಾಣಿಸಿದ ವಿಷಯದಲ್ಲಿ ನಿಯಮದ ಉಲ್ಲಂಘನೆಯಾದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಜಿಲ್ಲಾವಾರು ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು?

## ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ಎಸ್‌ಸಿಪಿ/ಟಿಎಸ್‌ಪಿ ಯೋಜನೆಗಾಗಿ ಬಿಡುಗಡೆಯಾಗಿರುವ ಅನುದಾನ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೪೧೫ (೨೯೩೫) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ಎಸ್‌ಸಿಪಿ/ಟಿಎಸ್‌ಪಿ ಯೋಜನೆಗಾಗಿ ಸರ್ಕಾರದಿಂದ ೨೦೧೨–೧೩, ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನವೆಷ್ಟು;

(ಆ) ಬಿಡುಗಡೆಯಾದ ಅನುದಾನದ ಪೈಕಿ ಖರ್ಚಾದ ಮತ್ತು ಬಾಕಿ ಉಳಿದಿರುವ ಅನುದಾನವೆಷ್ಟು; ಯಾವ ಉದ್ದೇಶಕ್ಕಾಗಿ ಸದರಿ ಅನುದಾನವು ಖರ್ಚಾಗಿರುತ್ತದೆ; (ವರ್ಷವಾರು, ಯೋಜನೆವಾರು, ಫಲಾನುಭವಿಗಳ ಸಂಪೂರ್ಣ ವಿವರ ನೀಡುವುದು)

(ಇ) ಹೈದರಾಬಾದ್–ಕರ್ನಾಟಕದ ೦೬ ಜಿಲ್ಲೆಗಳು ಹಾಗೂ ಹರಪನಹಳ್ಳಿಯಲ್ಲಿ ಕಳೆದ ೦೩ ವರ್ಷಗಳಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ಎಸ್‌ಸಿಪಿ/ಟಿಎಸ್‌ಪಿ ಯೋಜನೆಗಾಗಿ ಬಿಡುಗಡೆಯಾಗಿರುವ ಅನುದಾನ ಎಷ್ಟು; ಖರ್ಚಾದ ಹಣವೆಷ್ಟು; ಬಾಕಿ ಉಳಿದಿರುವ ಅನುದಾನವೆಷ್ಟು? (ವರ್ಷವಾರು, ಯೋಜನೆವಾರು, ಫಲಾನುಭವಿಗಳ ಸಂಪೂರ್ಣ ವಿವರ ನೀಡುವುದು)

## ಹೈದರಾಬಾದ್–ಕರ್ನಾಟಕ ಭಾಗದ ನಿರ್ಮಿತಿ ಕೇಂದ್ರಗಳಿಗೆ ಕಳೆದ ೫ ವರ್ಷಗಳಲ್ಲಿ ಆದಾಯ ತೆರಿಗೆ ಮಾರಾಟ ತೆರಿಗೆಯ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೪೧೬ (೭೫೩೪) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳ ಹಾಗೂ ಹರಪನಹಳ್ಳಿ ಸೇರಿದಂತೆ ನಿರ್ಮಿತಿ ಕೇಂದ್ರಗಳಿಗೆ ಕಳೆದ ೫ ವರ್ಷಗಳಲ್ಲಿ ಆದಾಯ ತೆರಿಗೆ/ಮಾರಾಟ ತೆರಿಗೆ ಇಲಾಖೆಯಿಂದ ನೋಟಿಸು ನೀಡಲಾಗಿದೆಯೇ; (ವಿವರ ನೀಡುವುದು)

(ಆ) ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳ ಹಾಗೂ ಹರಪನಹಳ್ಳಿ ಸೇರಿದಂತೆ ನಿರ್ಮಿತಿ ಕೇಂದ್ರಗಳಿಂದ ಆದಾಯ ತೆರಿಗೆ, ಮಾರಾಟ ತೆರಿಗೆ, ರಾಜಧನ ಹಾಗೂ ಇತರೆ ತೆರಿಗೆಗಳನ್ನು ಪಾವತಿಸಲಾಗುತ್ತಿದೆಯೇ; (ವರ್ಷವಾರು, ಜಿಲ್ಲಾವಾರು ತೆರಿಗೆವಾರು ಪ್ರತ್ಯೇಕ ವಿವರ ನೀಡುವುದು)

(ಇ) ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳು ಹಾಗೂ ಹರಪನಹಳ್ಳಿ ಸೇರಿದಂತೆ ನಿರ್ಮಿತಿ ಕೇಂದ್ರಗಳಿಗೆ ತೆರಿಗೆ ವಿನಾಯತಿ ನೀಡಲಾಗಿದೆಯೇ? (ವಿವರ ನೀಡುವುದು)

## ಆಳಂದ ತಾಲ್ಲೂಕಿನ ವಿ.ಕೆ. ಸಲಗರ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಮಂಜೂರಾತಿ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೪೧೭ (೨೯೩೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ವಿ.ಕೆ ಸಲಗರ ಗ್ರಾಮದಲ್ಲಿ ಪದವಿಪೂರ್ವ ಕಾಲೇಜು ಮಂಜೂರಾಗಿ ಕಟ್ಟಡ ನಿರ್ಮಿಸಲಾಗಿದೆಯೇ; ನಿರ್ಮಿಸಲಾಗಿದ್ದರೆ, ಮಂಜೂರಾತಿ, ಕಟ್ಟಡದ ಖರ್ಚು ಪೂರ್ಣಗೊಂಡ ವಿವರ ನೀಡುವುದು;

(ಆ) ಈ ಕಟ್ಟಡಕ್ಕಾಗಿ ಎಷ್ಟು ಜಮೀನು ಪಡೆಯಲಾಗಿದೆ; ಯಾರಿಂದ ಪಡೆಯಲಾಗಿದೆ; (ಮಾಹಿತಿ ನೀಡುವುದು)

(ಇ) ದೇಣಿಗೆದಾರರ ಸ್ಮರಣಾರ್ಥ ಕಾಲೇಜಿಗೆ ದೇಣಿಗೆದಾರರ ಹೆಸರಿಡುವ ಪ್ರಸ್ತಾವನೆಯೊಂದಿಗೆ ಜಮೀನು ಪಡೆಯಲಾಗಿದೆಯೇ;

(ಈ) ಸದರಿ ಕಾಲೇಜಿಗೆ ದೇಣಿಗೆದಾರರ ಹೆಸರು ಇಡುವ ಪ್ರಸ್ತಾವನೆಗೆ ಒಪ್ಪಿಗೆ ನೀಡಿ, ಕಾಲೇಜು ಕಟ್ಟಡ ಇಲಾಖೆಗೆ ಹಸ್ತಾಂತರಗೊಂಡಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು;

(ಉ) ಯಾವ ಕಾಲಮಿತಿಯವರೆಗೆ ಹಸ್ತಾಂತರ ಮಾಡಿ ಶೈಕ್ಷಣಿಕ ಚಟುವಟಿಕೆಗೆ ಬಳಸಿಕೊಳ್ಳಲು ಕ್ರಮವಹಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)

## ಶಿವಮೊಗ್ಗದಲ್ಲಿನ ವಿಮಾನ ನಿಲ್ದಾಣ ಕಾಮಗಾರಿ ಬಗ್ಗೆ

**ಶ್ರೀ ಎಂ.ಬಿ. ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೧೮ (೯೩೭) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿವಮೊಗ್ಗದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ವಿಮಾನ ನಿಲ್ದಾಣ ಕಾಮಗಾರಿಗೆ ಪ್ರಾರಂಭವಾದ ದಿನದಿಂದ ಈ ದಿನದವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ; ಇದಕ್ಕೆ ನಿಗದಿಪಡಿಸಿದ ಮೊತ್ತ ಎಷ್ಟು;

(ಆ) ಕಾಮಗಾರಿ ಪ್ರಾರಂಭಿಸುವ ಮೊದಲು ಸ್ವಾಧೀನ ಪಡಿಸಿಕೊಂಡ ಭೂಮಿ ಎಷ್ಟು; ಪರಿಹಾರ ನೀಡಿದ ಮೊತ್ತ ಎಷ್ಟು;

(ಇ) ಕಾಮಗಾರಿ ವಿಳಂಭವಾಗುತ್ತಿರುವುದಕ್ಕೆ ಕಾರಣ ಏನು; ಕಾಮಗಾರಿ ಪೂರ್ಣ ಆಗುವುದು ಯಾವಾಗ; (ವಿವರ ನೀಡುವುದು)

(ಈ) ಉಳಿದ ಕಾಮಗಾರಿಗೆ ಬೇಕಾದ ಹಣ ಎಷ್ಟು; ಸರ್ಕಾರ ಅದಕ್ಕಾಗಿ ಮೀಸಲಿಟ್ಟ ಹಣ ಎಷ್ಟು?

## ಪದವಿ ಪೂರ್ವ ಕಾಲೇಜು ಉಪನ್ಯಾಸಕರನ್ನು ನಿಯೋಜನೆ ಮಾಡುತ್ತಿರುವ ವಿಚಾರ

**ಶ್ರೀ ಎಂ.ಬಿ. ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೧೯ (೯೩೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರನ್ನು ಅನ್ಯ ಇಲಾಖೆಗಳಿಗೆ ನಿಯೋಜನೆಗೊಳಿಸಲು ನಿಯಮಾವಳಿಗಳ ಪ್ರಕಾರ ಅವಕಾಶವಿದೆಯೇ; ಇದ್ದಲ್ಲಿ, ಯಾವ ನಿಯಮಗಳಡಿ ನಿಯೋಜನೆ ಮಾಡಲಾಗುತ್ತಿದೆ; (ವಿವರ ನೀಡುವುದು)

(ಆ) ಇದುವರೆವಿಗೂ ನಿಯೋಜನೆಯಲ್ಲಿರುವ ಉಪನ್ಯಾಸಕರ ವಿವರ ನೀಡುವುದು;

(ಇ) ನಿಯೋಜನೆಯಿಂದ ತೆರವಾದ ಹುದ್ದೆಗಳಿಂದ ಆಗುತ್ತಿರುವ ತೊಂದರೆ ಮತ್ತು ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಶಾಲಾ ಮಕ್ಕಳಿಗೆ ವಿತರಿಸಿರುವ ಸೈಕಲ್‌ಗಳ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೨೦ (೯೪೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನಲ್ಲಿ ಶಾಲಾ ಮಕ್ಕಳಿಗೆ ನೀಡಿರುವ ಖರೀದಿಸಿದ ಸೈಕಲ್‌ಗಳ ಸಂಖ್ಯೆ ಎಷ್ಟು;

(ಆ) ಈ ಸೈಕಲ್‌ಗಳನ್ನು ಯಾವ ಕಂಪನಿಯಿಂದ ಖರೀದಿಸಲಾಯಿತು. ಪ್ರತಿ ಸೈಕಲ್‌ಗೆ ಸರ್ಕಾರ ನೀಡಿರುವ ಹಣ ಎಷ್ಟು;

(ಇ) ಪ್ರಸಕ್ತ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಸೈಕಲ್ ವಿತರಿಸಲಾಗಿದೆ;

(ಈ) ಪ್ರಸಕ್ತ ಸಾಲಿನಲ್ಲಿ ವಿತರಣೆ ಮಾಡಿರುವ ಸೈಕಲ್‌ಗಳಲ್ಲಿ ಗುಣಮಟ್ಟದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಯಾವ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಿದೆ?

## ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೨೧ (೯೪೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಅನುದಾನಿತ ಪ್ರಾಥಮಿಕ, ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;

(ಆ) ಸದರಿ, ಶಾಲೆಗಳಲ್ಲಿ ನಿವೃತ್ತಿ ಮತ್ತು ನಿಧನದಿಂದಾಗಿ ಹಾಗೂ ರಾಜೀನಾಮೆಯಿಂದಾಗಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಹುದ್ದೆವಾರು ವಿವರ ನೀಡುವುದು)

(ಇ) ಸದರಿ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ; ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ರಾಜ್ಯದಲ್ಲಿರುವ ಸಿಮೆಂಟ್ ಕಾರ್ಖಾನೆಗಳ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೨೨ (೯೪೬) ಮಾನ್ಯ ಭಾರಿ ಮತ್ತು ಮದ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಸಿಮೆಂಟ್ ಕಾರ್ಖಾನೆಗಳ ಸಂಖ್ಯೆ ಎಷ್ಟು;

(ಆ) ಇವುಗಳಲ್ಲಿ ಕಳೆದ ೨ ವರ್ಷಗಳಿಂದ ಸ್ಥಗಿತಗೊಂಡಿರುವ ಕಾರ್ಖಾನೆಗಳೆಷ್ಟು;

(ಇ) ಸದರಿ ಕಾರ್ಖಾನೆಗಳನ್ನು ಪುನಃ ಪ್ರಾರಂಭಿಸಲು ಸರ್ಕಾರ ಈವರೆಗೆ ನೀಡಲಾದ ಸಬ್ಸಿಡಿ ಹಣ ಎಷ್ಟು;

(ಈ) ಕೆಲ ಕಾರ್ಖಾನೆಯ ಮಾಲೀಕರುಗಳು ಸರ್ಕಾರದ ಎಲ್ಲಾ ಸವಲತ್ತುಗಳನ್ನು ಪಡೆದು ಕಾರ್ಮಿಕರಿಗೆ ಅನ್ಯಾಯವೆಸಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಹಾಗಿದ್ದರೆ, ಕಾರ್ಮಿಕರಿಗೆ ಬರಬೇಕಾದ ಬಾಕಿ ವೇತನ ಮತ್ತು ಇತರೆ ಭತ್ಯೆಗಳನ್ನು ಕಾರ್ಖಾನೆ ಮಾಲೀಕರಿಂದ ಕೊಡಿಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳುವುದು?

## ಸಣ್ಣ ಕೈಗಾರಿಕೆಗಳಿಗೆ ನೀಡುವ ಸಬ್ಸಿಡಿ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೨೩ (೨೯೪೪) ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಿಂದ ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ಸಬ್ಸಿಡಿ ರೂಪದಲ್ಲಿ ಬಿಡುಗಡೆ ಮಾಡಿರುವ ಮೊತ್ತವೆಷ್ಟು; (ವರ್ಷಾವಾರು ಮಾಹಿತಿ ನೀಡುವುದು)

(ಆ) ಪ್ರತಿ ವರ್ಷ ಇದಕ್ಕೆ ಮೀಸಲಿಡುವ ಹಣ ಎಷ್ಟು;

(ಇ) ಈ ಸಬ್ಸಿಡಿ ಹಣ ಬಿಡುಗಡೆ ಮಾಡಲು ಅನುಸರಿಸುವ ಮಾನದಂಡಗಳೇನು? (ವಿವರ ನೀಡುವುದು)

## ಪ್ರವಾಸಿ ಸ್ಥಳಗಳಲ್ಲಿರುವ ಅನಾನುಕೂಲಗಳ ಬಗ್ಗೆ

**ಶ್ರೀ ಅಶ್ವಥ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೨೪ (೨೯೪೮) ಮಾನ್ಯ ಭಾರಿ ಮತ್ತು ಮದ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳ ಪ್ರವಾಸಿ ಸ್ಥಳಗಳಲ್ಲಿ ಶೌಚಾಲಯ ವ್ಯವಸ್ಥೆಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಶೌಚಾಲಯ ನಿರ್ಮಾಣಕ್ಕಾಗಿ ಯಾವ

ಕ್ರಮ ಕೈಗೊಳ್ಳಲಾಗಿದೆ ಕೈಗೊಂಡಿದ್ದರೆ, ಇದಕ್ಕೆ ಮೀಸಲಿಟ್ಟಿರುವ ಹಣ ಎಷ್ಟು; ಎಷ್ಟು ಹಣವನ್ನು ಈಗಾಗಲೇ ಶೌಚಾಲಯ ನಿರ್ಮಾಣಕ್ಕಾಗಿ ಖರ್ಚು ಮಾಡಲಾಗಿದೆ; ಇನ್ನು ಅವಶ್ಯಕತೆ ಇರುವ ಹಣ ಎಷ್ಟು; (ವಿವರ ನೀಡುವುದು)

(ಆ) ನಂದಿ ಬೆಟ್ಟವನ್ನು ಆಕರ್ಷಣೀಯವಾಗಿ ಅಭಿವೃದ್ಧಿ ಮಾಡಲಾಗುತ್ತಿದೆಯೇ; ಹಾಗೂ ದೇವರಾಯನ ದುರ್ಗಕ್ಕೆ ರೋಪ್‌ವೇ ಯೋಜನೆಯನ್ನು ರೂಪಿಸಲಾಗಿದೆಯೇ; ಇಲ್ಲವಾದರೆ, ಅದನ್ನು ರೂಪಿಸಲು ಸರ್ಕಾರ ಕ್ರಮ ಕೈಗೊಳ್ಳವುದೇ? (ವಿವರ ನೀಡುವುದು)

## ಕೇಂದ್ರ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬಿಡುಗಡೆ ಮಾಡಿದ ಹಣದ ಬಗ್ಗೆ

**ಶ್ರೀ ಅಶ್ವಥ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೨೫ (೭೯೪೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ಹಾಗೂ ೨೦೧೫–೧೬ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಬಿಡುಗಡೆಯಾದ ಅನುದಾನದಲ್ಲಿ ಯಾವ ಯಾವ ಯೋಜನೆಗಳಿಗೆ ಹಣವನ್ನು ಉಪಯೋಗಿಸಲಾಗಿದೆ; ನಿರ್ಮಲ ಭಾರತ್/ಸ್ವಚ್ಛ ಭಾರತ್ ಯೋಜನೆಯನ್ನೊಳಗೊಂಡಂತೆ; (ವಿವರ ನೀಡುವುದು)

(ಆ) ಕೇಂದ್ರದಿಂದ ರಾಜ್ಯಕ್ಕೆ ಯಾವ ಯಾವ ಯೋಜನೆಯಡಿ ಎಷ್ಟೆಷ್ಟು; ಹಣವನ್ನು ಬಿಡುಗಡೆ ಮಾಡಲಾಗಿದೆ; ಹೀಗೆ ಬಿಡುಗಡೆಯಾದ ಹಣವನ್ನು ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣವನ್ನು

ಉಪಯೋಗಿಸಿಕೊಳ್ಳಲಾಗಿದೆ; (ಜಿಲ್ಲಾವಾರು ಯೋಜನಾವಾರು ಮಾಹಿತಿಯನ್ನು ನೀಡುವುದು)

(ಇ) ೨೦೧೪-೧೫ ಹಾಗೂ ೨೦೧೫-೧೬ನೇ ಸಾಲಿನಲ್ಲಿ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ನಿರ್ಮಾಣವಾದ ಶೌಚಾಲಯಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) ಈ ಶೌಚಾಲಯ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಪಾಲು ಎಷ್ಟು? (ವಿವರ ನೀಡುವುದು)

## ಬಸವ ವಸತಿ ಮತ್ತು ಇಂದಿರಾಗಾಂಧಿ ಯೋಜನೆ ಬಗ್ಗೆ

**ಶ್ರೀ ಅಶ್ವಥ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೪೨೬ (೯೫೦) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫ನೇ ಸಾಲಿನಲ್ಲಿ ಬಸವ ವಸತಿ ಯೋಜನೆ ಹಾಗೂ ಇಂದಿರಾಗಾಂಧಿ ಯೋಜನೆಗಳಡಿ ರಾಜ್ಯದಲ್ಲಿ ಎಷ್ಟು ಮನೆಗಳಿಗೆ ಅನುಮೋದನೆ ನೀಡಲಾಗಿದೆ;

(ಆ) ಬಸವ ವಸತಿ ಹಾಗೂ ಇಂದಿರಾಗಾಂಧಿ ಯೋಜನೆಗಳ ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಎಷ್ಟು ಫಲಾನುಭವಿಗಳಿಗೆ ವಸತಿಗಳನ್ನು ಹಂಚಿಕೆ ಮಾಡಲಾಗಿದೆ? (ಫಲಾನುಭವಿವಾರು ವಿಳಾಸ ಸಹಿತ ಗ್ರಾಮ ಪಂಚಾಯ್ತಿವಾರು ವಿವರ ನೀಡುವುದು)

## ಗ್ರಾಮ ಪಂಚಾಯಿತಿ ಕಟ್ಟಡಗಳ ಬಗ್ಗೆ

**ಶ್ರೀ ಅಶ್ವಥ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೪೨೭ (೯೫೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೊಸದಾಗಿ ವಿಸ್ತರಣೆಗೊಂಡ ೪೩೯ ಗ್ರಾಮ ಪಂಚಾಯ್ತಿಗಳ ಪೈಕಿ ಎಷ್ಟು ಗ್ರಾಮ ಪಂಚಾಯ್ತಿಗಳಿಗೆ ಸರ್ಕಾರಿ ಕಟ್ಟಡಗಳನ್ನು ಹಾಗೂ ಎಷ್ಟು ಖಾಸಗಿ ಕಟ್ಟಡಗಳನ್ನು ಒದಗಿಸಲಾಗಿದೆ;

(ಆ) ಸರ್ಕಾರಿ ಹಾಗೂ ಖಾಸಗಿ ಕಟ್ಟಡ ಕಛೇರಿಗಳಿಗೆ ಯಾವ ಯಾವ ಸೌಲಭ್ಯಗಳನ್ನು (ಅಂತರ್ಜಾಲ ಸೌಲಭ್ಯ ಸೇರಿದಂತೆ) ಒದಗಿಸಲಾಗಿದೆ; ಸರ್ಕಾರಿ ಹಾಗೂ ಖಾಸಗಿ ಕಟ್ಟಡಗಳಿಗೆ ನೀಡಿರುವ ಸೌಲಭ್ಯಗಳಲ್ಲಿ ತಾರತಮ್ಯವಿರುವುದೇ;

(ಇ) ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಮಾರಚಾಕನಹಳ್ಳಿ ಗ್ರಾಮಾ ಪಂಚಾಯ್ತಿ ಕಟ್ಟಡ ಖಾಸಗಿಯಾಗಿದ್ದು, ಇಲ್ಲಿಗೆ ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ; ಈ ಪಂಚಾಯ್ತಿಗಳಿಗೆ ಹಾಗೂ ಎಲ್ಲಾ ಖಾಸಗಿ ಕಟ್ಟಡಗಳನ್ನೊಳಗೊಂಡ ಪಂಚಾಯ್ತಿಗಳಿಗೆ, ಸರ್ಕಾರಿ ಕಟ್ಟಡವನ್ನು ಒದಗಿಸಲಾಗುವುದು ಯಾವಾಗ?

## ಶಾಲೆಗಳಲ್ಲಿ ಧ್ವಜಾರೋಹಣ

**ಶ್ರೀ ರಾಮಚಂದ್ರ ಗೌಡ (ಪಧವೀದರರ ಕ್ಷೇತ್ರ) :–**

೨೪೨೮ (೭೯೫೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕದ ಧ್ವಜವನ್ನು ಕನ್ನಡ ರಾಜ್ಯೋತ್ಸವದಂದು ಶಾಲೆಗಳಲ್ಲಿ ಧ್ವಜಾರೋಹಣ ಮಾಡಲು ಅವಕಾಶವಿಲ್ಲದಿರುವುದು ನಿಜವೇ;

(ಆ) ನಿಜವಾಗಿದ್ದಲ್ಲಿ, ಕಾರಣವೇನು;

(ಇ) ಕರ್ನಾಟಕದ ಧ್ವಜವನ್ನು ಧ್ವಜಾರೋಹಣ ಮಾಡಲು ಅನುಕೂಲವಾಗುವಂತೆ ಸರ್ಕಾರವು ಸೂಕ್ತ ಕ್ರಮ ತೆಗೆದುಕೊಳ್ಳಲು ಮುಂದಾಗುವುದೇ; ಈ ಸಂಬಂಧ ಸರ್ಕಾರದ ನಿಲುವೇನು?

## ಗುಣಮಟ್ಟದ ಪ್ಲಾಸ್ಟಿಕ್ ಬ್ಯಾಗ್‌ಗಳು

**ಶ್ರೀ ರಾಮಚಂದ್ರ ಗೌಡ (ಪಧವೀದರರ ಕ್ಷೇತ್ರ) :–**

೨೪೨೯ (೨೯೫೩) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತಮ ಗುಣಮಟ್ಟದ ಪ್ಲಾಸ್ಟಿಕ್ ಬ್ಯಾಗ್‌ಗಳ ಗುಣಲಕ್ಷಣಗಳೇನು;

(ಆ) ಸರ್ಕಾರದಿಂದ ಸೂಚಿತ ಗುಣಮಟ್ಟವಿಲ್ಲದ ಪ್ಲಾಸ್ಟಿಕ್ ಬ್ಯಾಗ್‌ಗಳ ತಯಾರಿಕೆಯನ್ನು ನಿಷೇಧಿಸಿರುವುದು ನಿಜವೇ;

(ಇ) ಪರಿಸರಕ್ಕೆ ಹಾನಿಕಾರಕವಾದ ಗುಣಮಟ್ಟವಿಲ್ಲದ ಪ್ಲಾಸ್ಟಿಕ್ ಕವರ್ ಮತ್ತು ಬ್ಯಾಗ್‌ಗಳ ತಯಾರಿಕೆ ರಾಜ್ಯದಲ್ಲಿ ನಡೆಯುತ್ತಿದ್ದು, ಈ ಸಂಬಂಧ ತಯಾರಿಕಾ ಘಟಕಗಳ ಮೇಲೆ ಸರಿಯಾದ ಕಾನೂನು ಕ್ರಮ ಜರುಗಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಈ ಸಂಬಂಧ ಮುಂದೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು;

(ಉ) ಕಳೆದ ಎರಡು ವರ್ಷಗಳಿಂದ ಗುಣಮಟ್ಟವಿಲ್ಲದ ಪ್ಲಾಸ್ಟಿಕ್ ಬ್ಯಾಗ್ ತಯಾರಿಕಾ ಘಟಕಗಳ ಮೇಲೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ?

## ನಷ್ಟಕ್ಕೊಳಗಾಗಿರುವ ಕೈಗಾರಿಕೆಗಳ ಬಗ್ಗೆ

**ಶ್ರೀ ರಾಮಚಂದ್ರ ಗೌಡ (ಪಧವೀದರರ ಕ್ಷೇತ್ರ) :–**

೨೪೩೦ (೨೯೭೦) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಎಷ್ಟು; (ಖಾಸಗಿ ಮತ್ತು ಸರ್ಕಾರಿ ಪ್ರತ್ಯೇಕ ಕೈಗಾರಿಕೆಗಳ ವಿವರ ನೀಡುವುದು)

(ಆ) ಕಳೆದ ಐದು ವರ್ಷಗಳಿಂದ ರಾಜ್ಯದಲ್ಲಿ ನಷ್ಟಕ್ಕೊಳಗಾಗಿರುವ ಮತ್ತು ಮುಚ್ಚಲ್ಪಟ್ಟಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಎಷ್ಟು; (ವಾರ್ಷಿಕವಾರು ವಿವರ ನೀಡುವುದು) ಖಾಸಗಿ ಮತ್ತು ಸರ್ಕಾರಿ ಕೈಗಾರಿಕೆಗಳ ಮಾಹಿತಿ ನೀಡುವುದು;

(ಇ) ಬೆಂಗಳೂರು ನಗರ ಜಿಲ್ಲೆಯಲ್ಲಿ ಮುಚ್ಚಲ್ಪಟ್ಟಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಯಾವುವು? (ವಿವರ ನೀಡುವುದು)

## ಕಾಲ್ಪನಿಕ ವೇತನ ನಿಗದಿ

**ಶ್ರೀ ರಾಮಚಂದ್ರ ಗೌಡ (ಪಧವೀದರರ ಕ್ಷೇತ್ರ) :–**

೨೪೩೧ (೭೯೫೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅನುದಾನಿತ ಶೈಕ್ಷಣಿಕ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸಿಬ್ಬಂದಿಗಳಿಗೆ ನೀಡಬೇಕಾಗಿರುವ ಕಾಲ್ಪನಿಕ ವೇತನ ಕುರಿತಂತೆ ಹಾಗೂ ಪಿಂಚಣಿ ಹಿಂಬಾಕಿ ಕುರಿತಂತೆ ಇತ್ತೀಚೆಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಆದೇಶವಾಗಿರುವುದು ನಿಜವೇ;

(ಆ) ನಿಜವಾಗಿದ್ದಲ್ಲಿ ಸದರಿ ಆದೇಶದ ಸಾರಾಂಶವೇನು;

(ಇ) ಕಾಲ್ಪನಿಕ ವೇತನ ವಿಷಯದ ಸಂಬಂಧ ಮಾಡಿದ್ದ ಶ್ರೀ ಬಸವರಾಜ ಹೊರಟ್ಟಿಯುವರ ಸಮಿತಿಯ ವರದಿಯುನ್ನು ಯಾವಾಗ ಮಂಡಿಸಲಾಯಿತು ಈ ವರದಿಯ ಸಾರಾಂಶವೇನು;

(ಈ) ಕಾಲ್ಪನಿಕ ವೇತನ ನೀಡುವ ಕುರಿತು ಸರ್ಕಾರದ ನಿಲುವೇನು?

## ಕಪಿಲ ತೀರ್ಥ ಫಾಲ್ಸ್ ನಲ್ಲಿ ಮೂಲಭೂತ ಸೌಕರ್ಯಗಳ ಕೊರತೆ

**ಶ್ರೀ ರಾಮಚಂದ್ರ ಗೌಡ (ಪಧವೀದರರ ಕ್ಷೇತ್ರ) :–**

೨೪೩೨ (೭೯೫೪) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕರ್ನಾಟಕದ ಜೋಗವೆಂದು ಪ್ರಸಿದ್ಧಿ ಪಡೆದಿರುವ ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕಿನ ಹನುಮಸಾಗರದ ಬಳಿ ಇರುವ ಕಪಿಲ ತೀರ್ಥ ಫಾಲ್ಸ್ ವೀಕ್ಷಿಸಲು ಸಾಕಷ್ಟು ಪ್ರವಾಸಿಗರು ಆಗಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹನುಮಸಾಗರದಿಂದ ಜಲಪಾತದ ಕಡೆಗೆ ೨ ಕಿ.ಮೀ. ರಸ್ತೆ ತೀರ ಹದಗೆಟ್ಟಿರುವುದು ಹಾಗೂ ಪ್ರವಾಸಿ ತಾಣದಲ್ಲಿ ಶೌಚಾಲಯ ಹಾಗೂ ಮೂಲಸೌಕರ್ಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು;

(ಇ) ಕಪಿಲ ತೀರ್ಥ ಫಾಲ್ಸ್ ವೀಕ್ಷಣೆಯ ಸ್ಥಳದಲ್ಲಿ ಪ್ರಪಾತವಿದ್ದು, ಮಕ್ಕಳು ಮತ್ತು ವೃದ್ಧರಿಗೆ ವೀಕ್ಷಿಸುವ ಸಂದರ್ಭದಲ್ಲಿ ಸೂಕ್ತ ಅಡ್ಡಪಟ್ಟಿಗಳಿಲ್ಲದೆ ಅಪಾಯ ಸಂಭವಿಸುವ ಸಾಧ್ಯತೆಗಳಿರುವುದರಿಂದ ತತ್‌ಕ್ಷಣ ಅದನ್ನು ನಿರ್ಮಿಸಲು ಸರ್ಕಾರವು ಮುಂದಾಗುವುದೆ?

## ೬.೭ ಹಾಗೂ ೮ ಸ್ಥಗಿತ ವೇತನ ಬಡ್ತಿ ಕುರಿತು

**ಶ್ರೀ ಎಸ್. ವ್ಹಿ. ಸಂಕನೂರ (ಪದವೀದರರ ಕ್ಷೇತ್ರ):–**

೨೪೩೩ (೭೫೫೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರಿ ನೌಕರರಿಗೆ ೨೦೧೨ರಲ್ಲಿ ೬ನೇ ವೇತನ ಸಮಿತಿ ಶಿಫಾರಸ್ಸಿನಂತೆ ನೀಡಿದ ೬, ೭ ಹಾಗೂ ೮ ಸ್ಥಗಿತ ವೇತನ ಬಡ್ತಿಗಳನ್ನು ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೂ ವಿಸ್ತರಿಸುವ ಕುರಿತು ಸರ್ಕಾರ ಏನು ಕ್ರಮ ಕೈಗೊಂಡಿದೆ;

(ಆ) ಸರ್ಕಾರಿ ನೌಕರರು ಈ ಸೌಲಭ್ಯ ಪಡೆದು ಸುಮಾರು ೩ ವರ್ಷಗಳಾದರೂ ಇನ್ನೂ ಅನುದಾನ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಈ ಸೌಲಭ್ಯ ವಿಸ್ತರಿಸದಿರಲು ಕಾರಣಗಳೇನು;

(ಇ) ಹಿಂದಿನ ಸದನದಲ್ಲಿ ಈ ಬಗ್ಗೆ ಭರವಸೆ ನೀಡಿದ್ದರೂ ಈವರೆವಿಗೂ ಏಕೆ ಕಾರ್ಯಗತವಾಗಿರುವುದಿಲ್ಲ?

## ಅನುದಾನಿತ ಪದವಿ ಕಾಲೇಜುಗಳಿಂದ ವಿಭಜಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸಿಬ್ಬಂದಿ ನೇಮಕಾತಿ ಕುರಿತು

**ಶ್ರೀ ಎಸ್. ವ್ಹಿ ಸಂಕನೂರ (ಪದವೀದರರ ಕ್ಷೇತ್ರ):–**

೨೪೩೪ (೭೯೫೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅನುದಾನಿತ ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;

(ಆ) ಸ್ಟಾಫಿಂಗ್ ಪ್ಯಾಟರ್ನ್ ಪ್ರಕಾರ ರಾಜ್ಯದ ವಿಭಜಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಲಾ, ವಾಣಿಜ್ಯ, ವಿಜ್ಞಾನ ವಿಭಾಗಗಳಲ್ಲಿ ಇರಬೇಕಾದ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; ಈ ಹುದ್ದೆಗಳಲ್ಲಿ ಸರ್ಕಾರ ಎಷ್ಟು ಅನುದಾನಿತ ಹುದ್ದೆಗಳನ್ನು ಮುಂಜೂರು ನೀಡಿದೆ; (ವಿವರ ನೀಡುವುದು)

(ಇ) ವಿಭಜಿತ ಪದವಿ ಪೂರ್ವ ಕಾಲೇಜುಗಳು ೧೯೯೪–೯೫ರ ಪೂರ್ವದಲ್ಲಿ ಪ್ರಾರಂಭವಾದ ಸಂಸ್ಥೆಗಳಾಗಿರುವುದರಿಂದ, ಸ್ಟಾಫಿಂಗ್ ಪ್ಯಾಟರ್ನ್ ಪ್ರಕಾರ ಅವಶ್ಯವಿರುವ ಎಲ್ಲಾ ಹುದ್ದೆಗಳನ್ನು ತುಂಬಿಕೊಳ್ಳಲು ಆಡಳಿತ ಮಂಡಳಿಗಳಿಗೆ ಅನುಮತಿ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

## ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರಿಕೆ ವಸಾಹತು ಉನ್ನತೀಕರಣ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೪೩೫ (೭೯೫೯) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫–೧೬ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ "ಕೈಗಾರಿಕಾ ವಸಾಹತು" ಉನ್ನತೀಕರಣಕ್ಕಾಗಿ ಬಿಡುಗಡೆಯಾಗಿರುವ ಹಣ ಎಷ್ಟು;

(ಆ) ಸದರಿ ಹಣದಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ?

## ತುರುವೇಕೆರೆ ಕ್ಷೇತ್ರದ ವಸತಿರಹಿತರ ಪಟ್ಟಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೨೪೩೬ (೨೯೬೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುರುವೇಕೆರೆ ಕ್ಷೇತ್ರದಲ್ಲಿ ವಸತಿ ರಹಿತರನ್ನು ಪಾರದರ್ಶಕವಾಗಿ ಆಯ್ಕೆ ಮಾಡಲಾಗಿದೆಯೇ;

(ಆ) ಹಾಗಿದ್ದಲ್ಲಿ, ಕ್ಷೇತ್ರದಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯಿತಿವಾರು ವಸತಿ ರಹಿತರ ಹೆಸರು, ವಿಳಾಸ, ವಿವರ ನೀಡುವುದು;

(ಇ) ಪ್ರತಿ ವರ್ಷ ವಸತಿ ರಹಿತರಿಗೆ ಮನೆ ನೀಡುವಲ್ಲಿ ಅನುಸರಿಸುವ ಮಾನದಂಡಗಳೇನು;

(ಈ) ಗ್ರಾಮಸಭೆಯಲ್ಲಿ ಆಯ್ಕೆ ಆದನಂತರ ಪಟ್ಟಿ ಬದಲಾವಣೆ ಮಾಡಲು ಯಾರಿಗೆ ಹಕ್ಕು ನೀಡಲಾಗಿದೆ;

(ಉ) ಹಾಗಿದ್ದಲ್ಲಿ, ಪಟ್ಟಿ ಬದಲಾವಣೆ ಮಾಡಿ, ಮನೆ ನೀಡಿದರೆ ಅಂತಹವರ ಮೇಲೆ ತೆಗೆದುಕೊಳ್ಳುವ ಕ್ರಮಗಳೇನು:

## ತುರುವೇಕೆರೆ ಕ್ಷೇತ್ರದ ೩೪ ಗ್ರಾಮ ಪಂಚಾಯತ್ ಶುದ್ಧ ಕುಡಿಯುವ ನೀರು ಘಟಕ ಬಗ್ಗೆ

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೨೪೩೭ (೨೯೬೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ೨೦೧೩–೧೪ನೇ ಸಾಲಿನಲ್ಲಿ ತುರುವೇಕೆರೆ ಕ್ಷೇತ್ರದಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಲು ಸರ್ಕಾರ ಯೋಚಿಸಿದೆಯೇ;

(ಆ) ಸರ್ಕಾರದ ಅನುದಾನದ ಜೊತೆಗೆ ಶಾಸಕರು (ವಿಧಾನ ಪರಿಷತ್ತು) ನಿಧಿ ಜೋಡಿಸಿದರೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ (೩೪) ಅನುಮತಿ ನೀಡಲಾಗುವುದೆ;

(ಇ) ಹಾಗಿದ್ದಲ್ಲಿ, ಇದರ ಸಂಬಂಧ ಇರುವ ಮಾನದಂಡಗಳೇನು; ಯಾವಾಗ ಅನುಮತಿ ನೀಡಲಾಗುವುದು;

(ಈ) ತುಮಕೂರು ಜಿಲ್ಲೆಯಲ್ಲಿ ಇರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಹೆಸರು, ವಿಳಾಸ ಒದಗಿಸುವುದು)

## ತುಮಕೂರು ಜಿಲ್ಲೆಯಲ್ಲಿ ಇರುವ ಪ್ರೌಢ ಶಾಲೆಗಳ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೨೪೩೮ (೨೯೬೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ತುಮಕೂರು ಜಿಲ್ಲೆಯಲ್ಲಿ ಇರುವ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಶಾಲೆಗಳ ವಿಳಾಸ ಸಹಿತ ಮಾಹಿತಿ ನೀಡುವುದು)

(ಆ) ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಜಿ.ಹೆಚ್.ಪಿ.ಎಸ್. ರಾಗಿ ಹಳ್ಳಿಯಲ್ಲಿ, ಸರ್ಕಾರದ ಆದೇಶ ಸಂಖ್ಯೆ ಇ.ಡಿ. ೩೮೫ ಎಂ.ಸಿ. ಇ.ಡಿ. ೨೦೦೬ ಬೆಂಗಳೂರು, ಇ.ಡಿ.೩೬ ಸ್ವೀಮರ್ (ಯುನಿಕಾ) ೨೦೦೫ ದಿನಾಂಕ ೧೫-೦೨-೨೦೦೬ರ ಉಲ್ಲೇಖದ ಅನ್ವಯ ಇರುವ ಹುದ್ದೆ ಕನ್ನಡ-ವಿಜ್ಞಾನವಾಗಿರುವುದೆ; ಕನ್ನಡ-ವಿಜ್ಞಾನ ಹುದ್ದೆಯನ್ನು ಕನ್ನಡ-ಆಂಗ್ಲ ಹುದ್ದೆಯನ್ನಾಗಿ ಬದಲಾಯಿಸಲಾಗಿದೆಯೇ; ಹಾಗಿದ್ದಲ್ಲಿ, ಆದೇಶದ ಪ್ರತಿ ಒದಗಿಸುವುದು;

(ಇ) ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಜಿ.ಹೆಚ್.ಪಿ.ಎಸ್. ರಾಗಿ ಹಳ್ಳಿಯಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಶಿಕ್ಷಕರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಈ) ಒಂದು ಭಾಷಾ ಹುದ್ದೆಯನ್ನು ಇನ್ನೊಂದು ಭಾಷಾ ಹುದ್ದೆಯನ್ನಾಗಿ ಪರಿವರ್ತಿಸಲು ಯಾರಿಗೆ ಅಧಿಕಾರ ನೀಡಲಾಗಿದೆ?

## ಗ್ರಾಮ ಪಂಚಾಯತ್ ಸಿಬ್ಬಂದಿಗಳ ಬಲವರ್ಧನೆ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೨೪೩೯ (೨೯೭೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಗ್ರಾಮ ಪಂಚಾಯತ್ ಸಿಬ್ಬಂದಿ ಬಲವರ್ಧನೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ; ಪಿ.ಡಿ.ಓ. ಗಳ ಸೇವಾ ನೀತಿ ವ್ಯಾಪ್ತಿ ವಿಚಾರದಲ್ಲಿ ಬದಲಾವಣೆಗಳನ್ನು ಮಾಡುವ ಚಿಂತನೆ ಸರ್ಕಾರಕ್ಕೆ ಇದೆಯೇ;

(ಆ) ಪ್ರತಿಯೊಂದು ಗ್ರಾಮ ಪಂಚಾಯತ್‌ಗೆ ವಾರ್ಷಿಕ ಯಾವ ಯಾವ ಯೋಜನೆಗಳಿಗೆ ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕೇಂದ್ರದಿಂದ

ರಾಜ್ಯದಿಂದ ಬರುವ ಅನುದಾನ ಎಷ್ಟು; (ಯೋಜನೆವಾರು, ರಾಜ್ಯ/ಕೇಂದ್ರ ಪಾಲು ಪ್ರತ್ಯೇಕವಾಗಿ ಮಾಹಿತಿ ನೀಡುವುದು)

## ಕಲಬುರಗಿ ಶಿಕ್ಷಣಾಯುಕ್ತಾಲಯದ ಬಗ್ಗೆ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೨೪೪೦ (೨೯೭೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿಯಲ್ಲಿ ಶಿಕ್ಷಣಾಯುಕ್ತಾಲಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಯಾವ ಉದ್ದೇಶಕ್ಕಾಗಿ ಈ ಆಯುಕ್ತಾಲಯವನ್ನು ತೆರೆಯಲಾಗಿದೆ;

(ಆ) ಈ ಶಿಕ್ಷಣ ಆಯುಕ್ತಾಲಯಕ್ಕೆ ನೀಡಬೇಕಾಗಿರುವ ಅಧಿಕಾರವನ್ನು ಮೊಟಕುಗೊಳಿಸಿ ಈಗಲೂ ಬೆಂಗಳೂರಿನ ಶಿಕ್ಷಣ ಆಯುಕ್ತರ ಕಛೇರಿಯಿಂದಲೇ ಹಣಕಾಸು ಸೇರಿದಂತೆ ಪ್ರಮುಖ ನಿರ್ಧಾರ ತೆಗೆದು ಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದರೇ, ಕಲಬುರಗಿ ಶಿಕ್ಷಣಾಯುಕ್ತಾಲಯಕ್ಕೆ ಎಲ್ಲಾ ಅಧಿಕಾರ ನೀಡುವುದಕ್ಕಾಗಿ ಕೈಗೊಂಡಿರುವ ಕ್ರಮಗಳಾವುವು? (ವಿವರ ನೀಡುವುದು)

## ಕಲಬುರಗಿಯಲ್ಲಿ ವಿಮಾನ ನಿಲ್ದಾಣ ನಿರ್ಮಾಣ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೨೪೪೧ (೨೯೭೮) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿಯಲ್ಲಿ ವಿಮಾನ ನಿಲ್ದಾಣ ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕಳೆದ ಒಂದು ವರ್ಷದಿಂದ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೇ, ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಕಾಮಗಾರಿ ಪುನರಾರಂಭಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಗ್ರಾಮ ಪಂಚಾಯತ್, ತಾಲ್ಲೂಕ್ ಪಂಚಾಯತ್ ಜಿಲ್ಲಾ ಪಂಚಾಯತ್ ಸದಸ್ಯರ ವೇತನದ ಬಗ್ಗೆ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೨೪೪೨ (೨೯೭೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮ ಪಂಚಾಯತ್, ತಾಲ್ಲೂಕ್ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರ ಬಲವರ್ಧನೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಆ) ಈ ಸದಸ್ಯರಿಗೆ ನೀಡುತ್ತಿರುವ ತಿಂಗಳ ವೇತನ ಎಷ್ಟು; ಈ ವೇತನದಿಂದ ಈ ಎಲ್ಲಾ ಸದಸ್ಯರ ಕುಟುಂಬವನ್ನು ನಿಭಾಯಿಸಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಸದಸ್ಯರಿಗೆ ತಿಂಗಳ ವೇತನವನ್ನು ಹೆಚ್ಚಿಸುವ ವಿಚಾರ ಸರ್ಕಾರದ ಮುಂದಿದೆಯೇ; ಇದ್ದರೆ, ಈ ವೇತನವನ್ನು ಯಾವಾಗಿನಿಮದ ಬಿಡುಗಡೆ ಮಾಡಲಾಗುವುದು?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ೨೦೧೪-೧೫ನೇ ಸಾಲಿನಲ್ಲಿ ಶೌಚಾಲಯ ನಿರ್ಮಿಸುವ ಬಗ್ಗೆ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೨೪೪೩ (೨೯೭೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ೨೦೧೪-೧೫ನೇ ಸಾಲಿನಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸುವ ಗುರಿ ಎಷ್ಟು; ಈಗಾಗಲೇ ಎಷ್ಟು ಶೌಚಾಲಯಗಳನ್ನು ನಿರ್ಮಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಜಿಲ್ಲೆಗಳಲ್ಲಿ ಕಳೆದ ಸಾಲಿನಲ್ಲಿ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ;

(ಇ) ೨೦೧೪-೧೫ನೇ ಸಾಲಿನಲ್ಲಿ ಈ ಜಿಲ್ಲೆಯಲ್ಲಿ ಎಷ್ಟು ಗ್ರಾಮ ಪಂಚಾಯತಿಗಳಲ್ಲಿ ಮುಕ್ತಿಧಾಮ ನಿರ್ಮಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಈ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಲ್ಲಿ ಆಟದ ಮೈದಾನವನ್ನು ಸ್ಮಶಾನ ನಿರ್ಮಾಣಗಳನ್ನಾಗಿ ಪರಿವರ್ತಿಸಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

## ಮರಳಿನ ಅಭಾವದ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೨೪೪೪ (೨೬೯೧) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಇತ್ತೀಚೆಗೆ ಮರಳಿನ ಅಭಾವ ತಲೆದೋರಿ ಸಾರ್ವಜನಿಕರಿಗೆ ಮತ್ತು ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು; (ವಿವರ ನೀಡುವುದು)

(ಇ) ಮರಳು ಇರುವ ಸ್ಥಳಗಳನ್ನು ಹರಾಜಿನ ಮೂಲಕ ವಿಲೇವಾರಿ ಮಾಡಲು ಸರ್ಕಾರಕ್ಕೆ ನ್ಯಾಯಾಲಯವು ನಿರ್ದೇಶನ ಮತ್ತು ಷರತ್ತುಗಳನ್ನು ವಿಧಿಸಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ನಿರ್ಣಯಗಳೇನು; (ವಿವರ ನೀಡುವುದು)

(ಈ) ಸರ್ಕಾರ ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಮರಳು ಲಭ್ಯವಾಗಲು ಈ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿ ಅನುಕೂಲ ಮಾಡಿಕೊಡಲಾಗುವುದೆ; (ವಿವರ ನೀಡುವುದು)

(ಉ) ಮರಳಿಗೆ ಬದಲಾಗಿ ಪರ್ಯಾಯವಾಗಿ ಬಳಸಲು ಇದುವರೆವಿಗೂ ಸರ್ಕಾರ ಯಾವುದಾದರೂ ಕ್ರಮ ಅನುಸರಿಸಿದೆಯೇ? (ವಿವರ ನೀಡುವುದು)

## ಮೈಸೂರು ಚಾಮರಾಜನಗರ ಜಿಲ್ಲೆಗಳಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೪೪೫ (೨೬೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲಿ ಈಗಾಗಲೇ ಕಾರ್ಯಚರಣೆ ಮಾಡುತ್ತಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಯಾವುವು;

(ಆ) ಈ ಯೋಜನೆಗಳಿಂದ ಯಾವ ಯಾವ ಗ್ರಾಮಗಳಿಗೆ ಸಂರಕ್ಷಿತ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ;

(ಇ) ಈ ಎರಡೂ ಜಿಲ್ಲೆಗಳಲ್ಲಿ ಕಾರ್ಯಪ್ರಗತಿಯಲ್ಲಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಯಾವುವು; ಈ ಯೋಜನೆಗಳ ಅಂದಾಜು ವೆಚ್ಚ, ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಈ ಯೋಜನೆಯಿಂದ ಪ್ರಯೋಜನ ಪಡೆಯುವ ಗ್ರಾಮಗಳು ಯಾವುವು; (ಕಾರ್ಯಪ್ರಗತಿಯ ಹಂತ ಇವುಗಳ ಬಗ್ಗೆ ವಿವರ ನೀಡುವುದು)

(ಈ) ಹೊಸದಾಗಿ ಯಾವ ಯಾವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಹೊಸ ಯೋಜನೆಗಳ ಪ್ರಸ್ತಾವನೆ ಯಾವ ಹಂತದಲ್ಲಿದೆ? (ವಿವರ ಒದಗಿಸುವುದು)

## ಗ್ರಾಮ ಪಂಚಾಯಿತಿಗಳಲ್ಲಿ ನೀಡುತ್ತಿರುವ ಮನೆ/ನಿವೇಶನಗಳ ಖಾತಾ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೪೪೬ (೨೭೦೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಜಮೀನುಗಳಲ್ಲಿ ಜಿಲ್ಲಾಧಿಕಾರಿಗಳಿಂದ ಭೂಪರಿವರ್ತನೆ ಮಾಡಿಸಿ, ನಿವೇಶಗಳನ್ನಾಗಿ ವಿಂಗಡಿಸಿ, ಬಡಾವಣೆ ನಿರ್ಮಿಸಿದ ನಿವೇಶನಗಳಿಗೆ ಸರ್ಕಾರ ಎ ಖಾತೆ, ಬಿ ಖಾತೆ ಇನ್ನು ಮುಂತಾದ ಹೆಸರಿನಲ್ಲಿ ಕರೆಯುವ ಖಾತೆಗಳ ಬಗ್ಗೆ ಸಾರ್ವಜನಿಕರಲ್ಲಿ ಗೊಂದಲವಿರುವುದರಿಂದ ಗ್ರಾಮ ಪಂಚಾಯಿತಿ ಮೂಲಕ ನೀಡುತ್ತಿರುವ ಖಾತೆಗಳ ವಿವರಗಳನ್ನು ನೀಡುವುದು;

(ಆ) ಈ ಬಗ್ಗೆ ಸರ್ಕಾರ ಖಾತೆಗಳ ಬಗ್ಗೆ ಅಕ್ರಮ ಸಕ್ರಮಗಳ ಬಗ್ಗೆ ಸ್ಪಷ್ಟವಾಗಿ ಹೊರಡಿಸಿರುವ ಸರ್ಕಾರಿ ಸುತ್ತೋಲೆ/ಸರ್ಕಾರಿ ಆದೇಶ/ ಅಧಿಸೂಚನೆಗಳ ಪ್ರತಿ ಒದಗಿಸುವುದು;

(ಇ) ಗ್ರಾಮ ಪಂಚಾಯಿತಿ ವತಿಯಿಂದ ಕಂದಾಯ/ಭೂಪರಿವರ್ತನೆ/ ಗ್ರಾಮ ಠಾಣಾ ನಿವೇಶನಗಳಿಗೆ ಬೇಕಾಬಿಟ್ಟಿ ತೆರಿಗೆ ವಸೂಲಾತಿ ಮಾಡುತ್ತಿರುವುದರಿಂದ, ಯಾವ ಯಾವ ನಿವೇಶಗಳಿಗೆ ಎಷ್ಟೆಷ್ಟು ತೆರಿಗೆ ನಿಗಧಿ ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡುವುದು; (ಈ ಬಗ್ಗೆ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳು/ಆದೇಶಗಳ ಪ್ರತಿ ಒದಗಿಸುವುದು)

(ಈ) ಭೂಪರಿವರ್ತನೆ/ಕಂದಾಯ/ಗ್ರಾಮ ಠಾಣಾ ಮತ್ತು ಸರ್ಕಾರಿ ಜಾಗದ ನಿವೇಶನದಲ್ಲಿ ಮನೆ ಕಟ್ಟಿಕೊಂಡವರಿಗೆ ಸರ್ಕಾರ ಗ್ರಾಮ ಪಂಚಾಯಿತಿ ವತಿಯಿಂದ ವಿಧಿಸುತ್ತಿರುವ ತೆರಿಗೆಯ ಮೊತ್ತ ಎಷ್ಟು? (ಪ್ರತ್ಯೇಕವಾಗಿ ವಿವರ ನೀಡುವುದು ಹಾಗೂ ಈ ಬಗ್ಗೆ ಸರ್ಕಾರ ಹೊರಡಿಸಿರುವ ಆದೇಶಗಳ ಪ್ರತಿ ಒದಗಿಸಿವುದು)

## ಚಾಮರಾಜನಗರ ಮಾರ್ಗ ರೈಲಿನ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೪೪೭ (೨೭೦೭) ಮಾನ್ಯ ಮೂಲ ಸೌಲಭ್ಯ ಅಭಿಭೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಹುದಿನಗಳ ಬೇಡಿಕೆಯಾದ ಬೆಂಗಳೂರಿನಿಂದ ಕೆಂಗೇರಿ ಕನಕಪುರ–ಕೊಳ್ಳೆಗಾಲ–ಯಳಂದೂರು–ಚಾಮರಾನಗರ ಮಾರ್ಗದ ನಿರ್ಮಾಣದ ಕಾಮಗಾರಿಗೆ ಕೇಂದ್ರ ರೈಲ್ವೆ ಇಲಾಖೆ ಅನುಮೋದನೆ ನೀಡಿದೆಯೇ;

(ಆ) ನೀಡಿದ್ದಲ್ಲಿ, ಈ ಯೋಜನೆಯ ಅಂದಾಜು ವೆಚ್ಚವೆಷ್ಟು; ಇದರಲ್ಲಿ ರಾಜ್ಯ ಸರ್ಕಾರ ನೀಡುತ್ತಿರುವ ಅನುದಾನವೆಷ್ಟು; (ವಿವರ ನೀಡುವುದು)

(ಇ) ರಾಜ್ಯ ಸರ್ಕಾರದ ಅನುದಾನವಲ್ಲದೆ, ಈ ಯೋಜನೆಗೆ ಬೇಕಾಗುವ ಎಷ್ಟು ಎಕರೆ ಜಮೀನನ್ನು ಉಚಿತವಾಗಿ ನೀಡಲಾಗುತ್ತಿದೆ; ಹಾಗೂ ಈ ಜಮೀನಿನ ಅಂದಾಜು ಮೌಲ್ಯವೆಷ್ಟು; (ವಿವರ ನೀಡುವುದು)

(ಈ) ಕೇಂದ್ರ ಸರ್ಕಾರ ಈ ಯೋಜನೆಗೆ ಹಣ ಬಿಡುಗಡೆ ಮಾಡಿ ಅನುಮೋದನೆ ನೀಡಿರುವುದರಿಂದ ಕಾಮಗಾರಿಯನ್ನ ಯಾವಾಗ ಪ್ರಾರಂಭ ಮಾಡಲಾಗುವುದು?

## ಚಿತ್ರದುರ್ಗ ಕೋಟೆಗೆ ಬಿಡುಗಡೆ ಆದ ಹಣ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು):–**

೨೪೪೮ (೨೯೪೦) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ಹಾಗೂ ೨೦೧೫–೧೬ನೇ ಸಾಲಿನಲ್ಲಿ ಚಿತ್ರದುರ್ಗ ನಗರದ ಕೋಟೆಗೆ ಪ್ರವಾಸೋದ್ಯಮ ಇಲಾಖೆಯಿಂದ ಬಿಡುಗಡೆ ಮಾಡಿರುವ ಹಣ ಎಷ್ಟು;

(ಆ) ಈ ಹಣದಲ್ಲಿ ಎಷ್ಟು ಕಾಮಗಾರಿಗಳು ಮುಗಿದಿರುತ್ತವೆ ಹಾಗೂ ಪ್ರಗತಿಯಲ್ಲಿವೆ;

(ಇ) ಖರ್ಚು ಮಾಡದೆ ಉಳಿದಿರುವ ಹಣ ಎಷ್ಟು;

(ಈ) ಇನ್ನು ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಇಲಾಖೆಯು ತೆಗೆದುಕೊಂಡಿರುವ ಕ್ರಮಗಳೇನು?

## ವಿವಿಧ ವಸತಿ ಯೋಜನೆಗಳು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು):–**

೨೪೪೯ (೨೯೬೯) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨ ವರ್ಷಗಳಿಂದ ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿರುವ ವಿವಿಧ ವಸತಿ ಯೋಜನೆಗಳಡಿ ಮನೆಗಳನ್ನು ವಿತರಿಸಲು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

(ಆ) ಬಂದಿರುವ ಅರ್ಜಿಗಳಲ್ಲಿ ವಿವಿಧ ವಸತಿ ಯೋಜನೆಯಡಿ ಎಷ್ಟು ಮನೆಗಳನ್ನು ವಿತರಿಸಲಾಗಿದೆ; ಬಾಕಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಎರಡು ಜಿಲ್ಲೆಗಳ ತಾಲ್ಲೂಕುವಾರು/ ಪಂಚಾಯಿತಿವಾರು ಅಂಕಿ ಅಂಶಗಳನ್ನು ನೀಡುವುದು)

(ಇ) ಬಾಕಿ ಇರುವ ಫಲಾನುಭವಿಗಳಿಗೆ ಇದುವರೆವಿಗೂ ಮನೆಗಳನ್ನು ವಿತರಿಸದಿರಲು ಕಾರಣವೇನು; ಇವರಿಗೆಲ್ಲಾ ಯಾವಾಗ ಮನೆಗಳನ್ನು ವಿತರಿಸಲಾಗುವುದು? (ವಿವರ ನೀಡುವುದು)

## ಉರ್ದು ಶಾಲಾ ಕಟ್ಟಡಗಳು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು):–**

೨೪೫೦ (೨೯೬೮) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಉರ್ದು ಶಾಲೆಗಳ ಸಂಖ್ಯೆ ಎಷ್ಟು; ಇದರಲ್ಲಿ ಶಿವಮೊಗ್ಗ, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿರುವ ಎಷ್ಟು ಉರ್ದು ಸರ್ಕಾರಿ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುತ್ತವೆ; (ಜಿಲ್ಲಾವಾರು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ದಾವಣಗೆರೆ ಜಿಲ್ಲೆಯಲ್ಲಿ ಕಟ್ಟಡಗಳನ್ನು ಕೆಡವಿ ನೂತನ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಉರ್ದು ಶಾಲೆಗಳ ಬಗ್ಗೆ ಮಾಹಿತಿ ನೀಡುವುದು)

(ಇ) ದಾವಣಗೆರೆ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಿಂದ ಕಟ್ಟಡಗಳನ್ನು ಕೆಡವಿ ನೂತನವಾಗಿ ಕಟ್ಟಿರುವ ಕಟ್ಟಡಗಳ ಸಂಖ್ಯೆ ಎಷ್ಟು ? (ಉರ್ದು ಶಾಲೆಗಳ ಬಗ್ಗೆ ತಾಲ್ಲೂಕುವಾರು ಮಾಹಿತಿ ನೀಡುವುದು)

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0 207/800 ಪ್ರತಿಗಳು/17–11–2015